10

# ಜೀವಿತವನ್ನು ಆಶೀರ್ವದಿಸಿದ ಮನುಷ್ಯನು

## (2 ಅರಸು 5:1-19)

ಎಲೀಷನು ಹೊಸ ಒಡಂಬಡಿಕೆಯಲ್ಲಿ ಕೇವಲ ಒಂದೇ ಒಂದು ಸಾರಿ ಸೂಚಿತನಾಗಿದ್ದಾನೆ. ಯೇಸು ಒಂದು ಸಾರಿ ಸಭಾಮಂದಿರದಲ್ಲಿ ಬೋಧಿಸುತ್ತಿರುವಾಗ, "ಎಲೀಷನೆಂಬ ಪ್ರವಾದಿಯ ಕಾಲದಲ್ಲಿ ಇಸ್ರಾಯೇಲ್ ಜನರೊಳಗೆ ಎಷ್ಟೋ ಮಂದಿ ಕುಷ್ಠರೋಗಿಗಳು ಇದ್ದಾಗ್ಯೂ ಅವರಲ್ಲಿ ಒಬ್ಬನಾದರೂ ಶುದ್ಧನಾಗದೆ ಸುರಿಯ ದೇಶದವನಾದ ನಾಮಾನನು ಮಾತ್ರ ಶುದ್ಧನಾದನು" ಎಂದು ಹೇಳಿದನು (ಲೂಕ 4:27). ದೇವರು ಯೆಹೂದಿಗಳಲ್ಲಿ ಆಸಕ್ತಿವಹಿಸುವಂತೆಯೇ ಅನ್ಯಜನಾಂಗಗಳಲ್ಲಿಯೂ ಕೂಡ ಆಸಕ್ತಿವಹಿಸುವವನಾಗಿದ್ದಾನೆ ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂದು ಯೇಸುವು ಬಯಸುತ್ತಿದ್ದನು ಆದರೆ ಆಧಾರಗಳು ಆತನ ಕೇಳುಗರನ್ನು ಕೆರಳುವಂತೆ ಮಾಡಿತು (ವಚನ 28). ನಾಮಾನನನ್ನು ಸ್ವಸ್ಥಮಾಡಿದ ಕಥೆಯು ಅವರೆಲ್ಲರಿಗೂ ಚಿರಪರಿಚಿತವಾಗಿತ್ತು, ಆದರೆ ಅದು ನಿಶ್ಚಿತವಾಗಿ ಅವರಿಗೆ ಮೆಚ್ಚಿಕೆಯಾದ ಹಳೆಒಡಂಬಡಿಕೆಯ ಸಂಗತಿಗಳಲ್ಲಿ ಒಂದಾಗಿ ಇರಲಿಲ್ಲ. ನಾಮಾನನು ಅನ್ಯಜನಾಂಗದವನಾಗಿದ್ದು ಅವನು ದೇವಜನಾಂಗದ ವೈರಿಯಾಗಿದ್ದನು. ಅವರ ಎಣಿಕೆಯಂತೆ ಆತನು ಒಬ್ಬ ಕುಷ್ಠರೋಗಿಯಾಗಿ ಸತ್ತಿರಲೇಬೇಕು!

ಇಸ್ರಾಯೇಲ್ಯರು ನಾಮಾನನ ಕಥೆಯನ್ನು ಮೆಚ್ಚಿಕೊಂಡಿರಲಿಕ್ಕಿಲ್ಲ, ಆದರೆ ಇದು ಇಂದು ಸಂದೇಶಕರೊಂದಿಗೆ ಜನಪ್ರಿಯವಾದದ್ದು ಆಗಿದೆ. ಒಂದು ವೇಳೆ ಒಬ್ಬ ಬೋಧಕನು ಎಲೀಷನ ಜೀವಿತದ ಜೊತೆ ಕೇವಲ ಒಂದು ಪ್ರಸಂಗವನ್ನು ಹೊಂದಿದ್ದರೂ ಬಹುಶಃ ಆ ಪ್ರಸಂಗವು ನಾಮಾನನದೇ ಆಗಿರುತ್ತದೆ. ನಾಮಾನ ಮತ್ತು ಇಂದಿನ ಪಾಪಿಗಳ ಮಧ್ಯೆ ಅನೇಕ ಸಾಮ್ಯತೆಗಳನ್ನು ಅನೇಕ ಸಂದೇಶಕರು ಕಂಡುಕೊಂಡಿದ್ದಾರೆ. ಬೈಬಲಿನಲ್ಲಿ ಅಂತಹ ಸತ್ವವನ್ನು ಹೊಂದಿರುವ ಬಹುವಾದ ಬೋಧನೆ ಮತ್ತು ಬೋಧಿಸುವಿಕೆಯ ಅಂಶಗಳನ್ನು ಹೊಂದಿರುವ ಏಕರೂಪದ ಪಾಠಗಳು ಇದಕ್ಕೆ ನ್ಯಾಯವನ್ನು ಒದಗಿಸಲಾರವು. ಆದ್ದರಿಂದ, ನಾವು ನಾಮಾನನ ಕಥೆಗೆ ಕೆಲವು ಪಾಠಗಳನ್ನು ಮೀಸಲಾಗಿಡುವಾ. ಈ ಮಂಡನೆಯು ವೇದಭಾಗದ ಸಂಪೂರ್ಣ ಅಲೋಕನವಾಗಿರುತ್ತದೆ; ಮುಂದಿನ ಸುವಾರ್ತಿಕ ಅನ್ವಯವನ್ನು ಮಾಡುವಂತದ್ದಾಗಿದೆ. ಮೂರನೆಯದು ಎಲೀಷನ ಸೇವಕನಾದ ಗೇಹಜಿಯ ಕಾರ್ಯದ ಮೇಲೆ ಮತ್ತು ಈ ಪರಿಸ್ಥಿತಿಯಲ್ಲಿ ಆತನ ನಂತರದ ಕಾರ್ಯಗಳ ಮೇಲೆ ಬೆಳಕು ಚೆಲ್ಲುವಂತದ್ದಾಗಿದೆ.

ಈ ಘಟನೆಯನ್ನು ನಾವು ಅಭ್ಯಾಸಿಸುತ್ತಿರುವಂತೆ, ಇದರ ಪ್ರಾಥಮಿಕ ಉದ್ದೇಶವನ್ನು ಅರಿತುಕೊಳ್ಳಲು ಇದು ಸಹಾಯದಾಯಕವಾಗುತ್ತದೆ. ಈ ಕಥೆಯು ಎಲೀಷನ ಕೇವಲ ಒಂದು ಅದ್ಭುತವನ್ನು ದಾಖಲಿಸಲು ಮೀಸಲಾಗಿಟ್ಟಿಲ್ಲ. ಅಥವಾ ಕೇವಲ ಕುಷ್ಠರೋಗವನ್ನು ದಿವ್ಯವಾದ ರೀತಿಯಲ್ಲಿ ವಾಸಿಮಾಡಿದುದನ್ನು ಬೈಬಲ್ ಒಳಗೊಂಡದೆ ಎಂಬುದರ ಬಗೆಗೆ ಹೇಳುವುದಕ್ಕೂ ಅಲ್ಲ. ಬದಲಾಗಿ ಅನ್ಯಜನಾಂಗಿಯರು ವಿಗ್ರಹರಾಧನೆಯಿಂದ ತಿರುಗಿಕೊಂಡು ಜೀವಿಸುವ ದೇವರಲ್ಲಿ ನಂಬಿಕೆಯನ್ನು ಇಟ್ಟರು ಎಂಬುದರ ಬಗೆಗೆ ಇದು ವಿವರವನ್ನು ಕೊಡುವುದಾಗಿದೆ.

## ಜಿನಾಮಾನನ ಸ್ಥಿತಿ[1] (5:1-7)

### ಒಬ್ಬ ರೋಗಗ್ರಸ್ಥ ಮನುಷ್ಯ

ಎರಡನೆಯ ಅರಸು ಅಧ್ಯಾಯ 5 ಈ ವೈಶಿಷ್ಟ್ಯವಾದ ವ್ಯಕ್ತಿಯನ್ನು ಪರಿಚಯಿಸುವುದರ ಮೂಲಕ ಪ್ರಾರಂಭವಾಗುತ್ತದೆ: "ಅರಾಮ್ಯರ ಅರಸನಿಗೆ ನಾಮಾನನೆಂಬನೊಬ್ಬ ಸೇನಾಪತಿಯಿದ್ದನು. ಯೆಹೋವನು ಇವನ ಮುಖಾಂತರವಾಗಿ ಅರಾಮ್ಯರಿಗೆ ಜಯವನ್ನು ಅನುಗ್ರಹಿಸಿದರಿಂದ ಅರಸನು ಇವನನ್ನು ಮಹಾಪುರುಷನೆಂದೂ ಸನ್ಮಾನ ಯೋಗ್ಯನೆಂದೂ ಎಣಿಸುತ್ತಿದ್ದನು" (ವಚನ 1ಎ).

ವಚನ 1 ಈತನು ಒಬ್ಬ ಅರಾಮ್ಯರನಾಗಿದ್ದನು ಎಂದು ಸೂಚಿಸುತ್ತದೆ, ಆದರೆ ಯೇಸು "*ಸಿರಿಯ* [ಸುರಿಯ] ದೇಶದವನಾದ ನಾಮಾನನು" ಎಂದು ಕರೆಯುತ್ತಾನೆ (ಲೂಕ 4:27; ಒತ್ತಿ ಹೇಳಿದ್ದು ನನ್ನದು). ಹಳೆಯ ಒಡಂಬಡಿಕೆಯಲ್ಲಿ "ಅರಾಮ್ಯ" ಎಂಬ ಪದವು ದಮಸ್ಕವು ರಾಜಧಾನಿಯಾದಂತಹ ಪಾಲಿಸ್ತೈನಿನ ಉತ್ತರ - ಈಶಾನ್ಯದ ಪ್ರಾಂತ್ಯವನ್ನು ಸೂಚಿಸಲು ಬಳಸಲಾಗುತ್ತಿತ್ತು (2 ಅರಸು 8:7 ನೋಡಿರಿ). ಹೊಸ ಒಡಂಬಡಿಕೆಯ ಸಮಯದಲ್ಲಿ, ಈ ಪ್ರದೇಶವು "ಸಿರಿಯ" ಎಂದು ಗುರುತಿಸಲ್ಪಟ್ಟಿತು (ಮತ್ತಾಯ 4:24; ಲೂಕ 2:2; ಅಪೊಸ್ತಲರ ಕೃತ್ಯಗಳು 15:41; ಈ ಪುಸ್ತಕದಲ್ಲಿ ಇನ್ನೊಂದೆಡೆ ಸಿಕ್ಕುವ ಇಸ್ರಾಯೇಲು ಮತ್ತು ಎಲೀಷನ ಕಾಲದಲ್ಲಿನ ಸುತ್ತುವರೆದ ರಾಜ್ಯಗಳು ಎಂಬ ನಕಾಶೆಯನ್ನು ನೋಡಿರಿ). ಹೀಗೆ ಕೆಲವು ಭಾಷಾಂತರಕಾರರು ಹಳೆಯ ಒಡಂಬಡಿಕೆಯಲ್ಲಿನ "ಅರಾಮ್ಯರು" ಎಂಬುದಕ್ಕೆ ಬದಲಾಗಿ "ಸಿರಿಯ" ಎಂಬ ಪಾರಿಭಾಷೆಯನ್ನು ಬಳಸಿದ್ದಾರೆ (ನೋಡಿ 2 ಅರಸು 5:1; KJV).

ಅರಾಮ್ಯ ದೇಶವು ನಮ್ಮ ಹಿಂದಿನ ಎಲೀಯನ ಜೀವಿತದ ಕುರಿತ ಅಧ್ಯಯನದ ಸಮಯದಲ್ಲಿ ಒಂದು ಪ್ರಮುಖ ಪ್ರಾಂತ್ಯವಾಗಿತ್ತು. ಅಹಾಬನು ಇಸ್ರಾಯೇಲಿನ ಅರಸನಾಗಿದ್ದು, ಅರಾಮ್ಯರ ಅರಸನಾದ ಬೆನ್ಹದದನ ಜೊತೆಯಲ್ಲಿ ಅನೇಕ ಯುದ್ಧಗಳಲ್ಲಿ ಹೋರಾಡಿದನು (1 ಅರಸು 20:1-45; 22:1-44). ಆ ಯುದ್ಧವೊಂದರಲ್ಲಿ ಅನಾಮಧೇಯನಾದ ಬಿಲ್ಲುಗಾರನ ಬಾಣವೊಂದು ಅಹಾಬನ ಯುದ್ಧ ಕವಚವನ್ನು ಸೀಳಿಕೊಂಡು ಬೇಧ್ಯವಾಗುವಂತಹ ಘಾಯವನ್ನು ಮಾಡಿ ಆತನು ಕೊಲ್ಲಲ್ಪಟ್ಟನು (1 ಅರಸು 22:34, 35). ಹೇಗೋ, ಇದೇ ಮೊದಲಬಾರಿ ಅರಾಮ್ಯವು ಎಲೀಷನ ಜೀವಿತದ ಜೊತೆಯಲ್ಲಿ ಸಂಪರ್ಕ ಹೊಂದಿರುವದು ಸೂಚಿತವಾಗಿದೆ. ಉಳಿದ ಅದ್ಯಯನಗಳಲ್ಲಿ ಅರಾಮ್ಯರೊಡನೆ ಶತ್ರುಭಾವನೆಯು ಪ್ರಭಲ ವಾಗಿ ಉಳಿಯಿತು (ನೋಡಿರಿ 2 ಅರಸು 6:8, 24; 8:7, 28). ಎಲೀಷನ ಜೀವಿತವು ಸಮಾಪ್ತಿಯಾದರೂ ಸಂಘರ್ಷಗಳು ಇನ್ನೂ ಮುಂದುವರೆದವು (ನೋಡಿರಿ 2 ಅರಸು 13:17-20ಎ).

ನಾಮಾನನು ಅರಾಮ್ಯರ "ಸೇನೆಯ ಸೇನಾಪತಿಯಾಗಿದ್ದನು." NIVಯು ಈತನನ್ನು "ಸೇನೆಯ ದಂಡನಾಯಕ" ಎಂದು ಕರೆದಿದೆ. ದಿನಗಳು ಉರುಳಿದಂತೆ, ಬೆನ್ಹದದನು ಸೇನೆಯನ್ನು ನಡೆಸಿದನು (1 ಅರಸು 20:1, 26); ಆದರೆ ಆತನು ತನ್ನ ಸೈನ್ಯದ ತುಕಡಿಯ ನಾಯಕತ್ವವನ್ನು ತನ್ನ "ಪರಾಕ್ರಮಿ ಯೋಧನಾದ" ನಾಮಾನನಿಗೆ ಕೊಟ್ಟಿರಬಹುದು. ಅರಸನು ನಾಮಾನನನ್ನು "ಸನ್ಮಾನ ಯೋಗ್ಯನೆಂದು" ಪರಿಗಣಿಸುತ್ತಿದ್ದನು ಮತ್ತು "ಆತನಿಗೆ ಮಹಾಗೌರವವನ್ನು" ಕೊಡುತ್ತಿದ್ದನು.

"ಆತನಿಂದ" - ವಿಗ್ರಹಾರಾಧನೆಯ ದಂಡನಾಯಕನಾದ ನಾಮಾನನ ಮೂಲಕ - ಯೆಹೋವನು ಅರಾಮ್ಯರಿಗೆ ಜಯವನ್ನು ದಯಪಾಲಿಸಿದ್ದನು ಎಂಬುದನ್ನು ಓದುವುದರಿಂದ ಕೆಲವರು ಆಶ್ಚರ್ಯಪಡಬಹುದು. ದೇವರು ರಾಷ್ಟ್ರಗಳ ವಿಷಯಗಳಲ್ಲಿ ಕಾರ್ಯ ಪ್ರವೃತ್ತನಾಗಿರುತ್ತಾನೆ ಮತ್ತು ಅಪನಂಬಿಗಸ್ತರನ್ನೂ ತನ್ನ ಉದ್ದೇಶವನ್ನು ಸಂಪೂರ್ಣಗೊಳಿಸುವಲ್ಲಿ ಬಳಸಬಹುದು (ನೋಡಿರಿ ಯೆಶಾಯ 44:28; ಯೆಹೆಜ್ಕೇಲ 30:24, 25; ದಾನಿಯೇಲ

4:25). ಉದಾಹರಣೆಗೆ, ದೇವಜನರು ಆತನನ್ನು ತಿರಸ್ಕರಿಸಿದಾಗ, ಕೆಲಸಾರಿ ಕರ್ತನು ಅವರ ಮೇಲೆ ವಿಗ್ರಹಾರಾಧನಾ ರಾಷ್ಟ್ರಗಳ ಕೈಗೆ ಸೋಲಿ ಸಲು ಒಪ್ಪಿಸಿಕೊಟ್ಟನು (ನೋಡಿರಿ 2 ಅರಸು 13:3). 2 ಅರಸು 5:1ರಲ್ಲಿ "ವಿಜಯವು" ಅರಾಮ್ಯರು ಅಹಾಬನನ್ನೂ ಆತನ ಸೈನ್ಯವನ್ನೂ ಸೋಲಿಸಿದ್ದನ್ನು ಸೂಚಿಸಿರಬಹುದು. ಯೆಹೂದಿ ಸಂಪ್ರದಾಯಗಳ ಪ್ರಕಾರ, ಅಹಾಬನು ಒಬ್ಬ ಬಿಲ್ಲುಗಾರನ ಬಾಣದಿಂದ ಕೊಲ್ಲಲ್ಪಟ್ಟನು ಆ ಬಿಲ್ಲುಗಾರನು ನಾಮಾನನು.[2]

ನಾಮಾನನ ಜೀವಿತದಲ್ಲಿ ಆಕರ್ಷಕವಾದ ಯೋಗ್ಯತೆಗಳ ಯಾದಿ ಇತ್ತು: ಆತನು ಅರಾಮ್ಯರ ಸೇನೆಯ ಮುಖ್ಯದಂಡನಾಯಕನೂ, ಶ್ರೇಷ್ಟವ್ಯಕ್ತಿಯೂ ಹಾಗೂ ಗೌರವಕ್ಕೆ ಯೋಗ್ಯವಾದ ಮನುಷ್ಯನೂ, ಧೈರ್ಯಶಾಲಿಯಾದ ಮತ್ತು ಶೂರ ಸೈನಿಕನಾಗಿದ್ದನು. ಆನಂತರ ಬರಬಹುದಾದ ಮಾರಣಾಂತಿಕವಾದಂಥಹ ಮಾತುಗಳು "ಆದರೆ ... ಇವನು ಕುಷ್ಠರೋಗಿಯಾಗಿದ್ದನು" (ವಚನ 1ಬಿ) ಎಂಬುದೇ.

ಬೈಬಲಿನಲ್ಲಿ, "ಕುಷ್ಠವು" ಒಂದು ಜಾತಿಯ ಪಾರಿಭಾಷಿಕವಾಗಿ ಒಂದು ರೋಗವನ್ನು ಮತ್ತು ಅದರ ಸ್ಥಿತಿಯನ್ನು ವಿಶಾಲವಾದ ವ್ಯಾಪ್ತಿಯಲ್ಲಿ ವರ್ಣಿಸಲು ಬಳಸುವಂತದ್ದಾಗಿದೆ. ಇದು ಯಾವಾಗಲೂ ಇಂದು ನಾವು ಕರೆಯುವ ಕುಷ್ಠವನ್ನು (Hansen's disease) ಸೂಚಿಸುವಂತದಲ್ಲ. ಇದು ಈ ಪ್ರಕರಣದಲ್ಲಿರುತ್ತಿರುವುದರಿಂದ, ಕೆಲ ಲೇಖಕರು ನಾಮಾನನ ಸ್ಥಿತಿಯಲ್ಲಿ ಸಂಕ್ಷಿಪ್ತಕರಿಸುತ್ತಾರೆ ಮತ್ತು ಆತನು ಕೇವಲ ಗಂಭೀರವಾದ ಚರ್ಮದ ಕಾಯಿಲೆಯನ್ನು ಹೊಂದಿದ್ದನು ಎಂದು ಸೂಚಿಸುತ್ತಾರೆ.[3] ಆ ಯೋಧನು ಚಿಕ್ಕ ವೈದ್ಯಕೀಯ ಸ್ಥಿತಿಗೆ ಸಂಬಂಧಿಸುವಂಥಗಳಿಂದ ನರಳುತ್ತಿರಲಿಲ್ಲ ಎಂದು ನಮ್ಮ ವೇದಭಾಗದಲ್ಲಿರುವ ಅನೇಕ ವಿವರಣಗಳು ಸೂಚಿಸುತ್ತವೆ. ನಾಮಾನನು ಅದನ್ನು ಗುಣಪಡಿಸಿಕೊಳ್ಳುವುದಕ್ಕಾಗಿ ಹುಡುಕಲು ಇಚ್ಚಿಸಿದಂಥ ಅತಿರೇಕದ ಕ್ರಮಗಳು ಮೊದಲಿವೆ. ಎಡನೆಯದರಲ್ಲಿ ಈ ರೋಗಕ್ಕೋಸ್ಕರ ಜೀವನ ಮತ್ತು ಮರಣದಷ್ಟು ಗಂಭೀರವಾದದ್ದು ಇಸ್ರಾಯೇಲಿನ ಅರಸನ ಮಾತಗಳು ಸೂಚಿಸುತ್ತವೆ (ವಚನ 7ಎ).

ಅಂತಿಮವಾಗಿ, ಅಲ್ಲೊಂದು ಹೇಳಿಕೆಯಿದೆ, ಯಾವಾಗ ಇನ್ನೊಬ್ಬ ಮನುಷ್ಯನು ನಾಮಾನನ ಕುಷ್ಠದೊಡನೆ ಸಂಬಂಧವನ್ನಿರಿಸಿಕೊಳ್ಳುತ್ತಾನೆಯೋ ಆ ಮನುಷ್ಯನು ಕೂಡ "ಕುಷ್ಠ ಹತ್ತಿ *ಹಿಮದಂತೆ ಬೆಳ್ಳಗಾದನು*" (ವಚನ 27; ಒತ್ತಿ ಹೇಳಿದ್ದು ನನ್ನದು). ಪ್ರಾಚೀನ ಮತ್ತು ಆಧುನಿಕ ಲೇಖಕರು ಕುಷ್ಠವನ್ನು "ಬಿಳಿಯ ವೈವಿಧ್ಯತೆ" ಎಂದು ಸೂಚಿಸುತ್ತಾರೆ. ಈ ರೋಗವು "ಅತಿ ವಿಕಾರವಾದ,"[4] "ಹೆಚ್ಚಾಗಿ ಹೊಡೆದೆಬ್ಬಿಸುವ ರೀತಿಯದು"[5] ಆಗಿದೆ. ರೋಗಿಯು ರೋಗಿಷ್ಟನಂತಿದ್ದು ಬಿಳುಚಿಕೊಂಡ ಬಣ್ಣದನಾಗಿದ್ದು ... ಆಧುನಿಕ ವೈದ್ಯಕೀಯ ಶಾಸ್ತ್ರದ ಪ್ರಕಾರ ಕುಷ್ಠ ಎಂದು ಕರೆಯಲಾಗುತ್ತದೆ ಎಂದು "ಬಿಳಿಯ ಕುಷ್ಟವು"[6] ವರ್ಣಿಸಲ್ಪಟ್ಟಿದೆ. ಮೋಶೆಯ ಅಕ್ಕನಾದ ಮಿರ್ಯಾಮಳು ಕುಷ್ಟದ ಹೊಡತಕ್ಕೆ ಒಳಗಾದಾಗ, ಆಕೆಯು ಮಂಜಿನಂತ ಬೆಳ್ಳಗಿನ ಕುಷ್ಠವನ್ನು ಹೊಂದಿದವಳಂತೆ ಕಾಣಿಸಿಕೊಂಡಳು (ಅರಣ್ಯಕಾಂಡ 12:10). "ಆಕೆಯು ಸತ್ತವರ ಹಾಗೆ ಕಾಣುತ್ತಿದ್ದಳು ಎಂದು ಆಕೆಯ ಅಣ್ಣನಾದ ಆರೋನನು ಹೇಳುತ್ತಾನೆ" (ವಚನ 12). ನಾಮಾನನು ಸಹ ಅದಕ್ಕೆ ಹೋಲಿಕೆಯಾದಂತದ್ದನ್ನೇ ಹೊಂದಿದ್ದನು. ಒಂದು ವೇಳೆ ಇದೂ ಸಹ ಅದೇ ರೀತಿಯ ಪ್ರಮಾಣ ಪತ್ರ ಹೊಂದಿದ್ದಿರಬಹುದು. ಆತನು ಗುಣವಾಗದ ಕಾಯಿಲೆಯಿಂದ - "ನಿಶ್ಚಿತವಾಗಿ ನಿಧಾನವಾಗಿಯಾದರು ಕೂಡ ಮಾರಾಣಾಂತಿಕವಾದಂಥಹ ಚರ್ಮರೋಗದಿಂದ"[7] ಬಹಳವಾಗಿ ಕಷ್ಟಪಡುತ್ತಿದ್ದನು.

ಅರಾಮ್ಯದಲ್ಲಿ ವಾಸಿಯಾಗುವಂತಹ ಎಲ್ಲಾ ಮೂಲಗಳನ್ನು ನಾಮಾನನು ಮುಗಿಸಿಬಿಟ್ಟಿದ್ದನು, ಆದರೆ ಯಾವುದೇ ಫಲವು ಸಿಕ್ಕಿರಲಿಲ್ಲ. ಅರಾಮ್ಯರ ವೈದ್ಯರು ಏನೂ ಮಾಡದೇ ಹೋದರು; ಆತನ ವಿಗ್ರಹ "ದೇವರುಗಳು" ನಿರರ್ಥಕರಾದರು. ನಿಸ್ಸಂಶಯವಾಗಿ ಆತನು ನಿರಾಶನಾದನು.

**ಕರುಣೆಯುಳ್ಳ ಹುಡುಗಿ**

ನಂತರ ಸಹಾಯವು ಬಂದದ್ದು ನೆನಸದ ಮೂಲದಿಂದ ವಚನ 2ರಲ್ಲಿ ನಾವು ನೋಡುವಂತೆ “ಅರಾಮ್ಯರು ಒಂದು ಸಾರಿ ಸುಲಿಗೆ ಮಾಡುವುದಕ್ಕೋಸ್ಕರ ಇಸ್ರಾಯೇಲ್ಯರ ಪ್ರಾಂತಕ್ಕೆ ಹೋಗಿಬರುವಾಗ ಅಲ್ಲಿನ ಒಬ್ಬ ಹುಡುಗಿಯನ್ನು ಹಿಡಿದುಕೊಂಡು ಬಂದರು; ಆಕೆಯು ನಾಮಾನನ ಹೆಂಡತಿಗೆ ದಾಸಿಯಾದಳು.” ಅಲ್ಲಿ ಅರಾಮ್ಯರು ಮತ್ತು ಇಸ್ರಾಯೇಲ್ಯರ ಮಧ್ಯ ಗಡಿಯಲ್ಲಿ ಹೋರಾಟವು ನಿರಂತರವಾಗಿ ನಡೆಯುತ್ತಿತ್ತು (ನೋಡಿರಿ 2 ಅರಸು 6:8, 9).[8] ಅರಾಮ್ಯರ ಸೈನಿಕರಿಂದ ಆಗುವ ಸುಲಿಗೆಗಳು ಇಸ್ರಾಯೇಲಿನಲ್ಲಿ ಸತತವಾಗಿ ದಾಳಿಯನ್ನು ಮಾಡುತ್ತಲೇ ಇದ್ದವು (ನೋಡಿರಿ 6:23ಬಿ). ಅವರು ನಾಮಾನನ ಮನೆ ವಾರ್ತೆಗೆ ಸಹಾಯಕವಾಗುವ ಚಿಕ್ಕ ಹುಡುಗಿಯನ್ನು ದಾಸಿಯಾಗಿ ಹಿಡಿದು ತಂದರು.

ಒಂದು ಕ್ಷಣ, ಆ ದಾಸಿಯ ಸ್ಥಳದಲ್ಲಿ ನಿಮ್ಮನ್ನು ನೀವು ನಿಲ್ಲಿಸಿಕೊಳ್ಳಿರಿ. ನೀವು ನಿಮ್ಮ ತಂದೆ ತಾಯಿಗಳ ಪ್ರೀತಿಯ ತೆಕ್ಕೆಯಿಂದ ಅಗಲಿಸಲ್ಪಟ್ಟಿದ್ದೀರಿ ಮತ್ತು ಬೇರೊಂದು ಪರದೇಶಕ್ಕೆ ತರಲ್ಪಟ್ಟಿದ್ದೀರಿ. ನಿಮ್ಮ ಬಾಲ್ಯದ ಆಟೋಟಗಳನ್ನು ಆನಂದಿಸುವ ಬದಲು, ನೀವು ದಾಸರಂತೆ ಸೇವೆ ಮಾಡುವುದಕ್ಕೆ ಒತ್ತಾಯಿಸಲ್ಪಡುತ್ತಾ ಇದ್ದೀರಿ. ಸಂತಸದಿಂದ ಮನೆಯಲ್ಲಿ ಇರುವ ಬದಲಾಗಿ ದುಃಖದಿಂದ ಕೂಡಿದ ಮನೆಯಲ್ಲಿ ನೀವು ವಾಸಸಬೇಕಾಗಿದೆ. ದೇವಭಕ್ತಿಯ ಕುಟುಂಬದ ಭಾಗವಾಗಿ ಇರುವ ಬದಲು, ಸುಳ್ಳುದೇವರ ಆರಾಧಕರಿಂದ ನೀವು ಸುತ್ತುವರೆಯಲ್ಪಟ್ಟಿದ್ದೀರಿ. ಈ ಹುಡುಗಿಗೆ ಕಹಿಭಾವನೆ ತೋರುವದು ರೇಗುವದು ಸುಲಭವಾದದ್ದಾಗಿತ್ತು, ಆದರೆ ಪ್ರತ್ಯಕ್ಷವಾಗಿ ಅವಳು ಹಾಗೆ ಮಾಡಲಿಲ್ಲ. ತನ್ನ ದುರಾದೃಷ್ಟಕ್ಕೆ ದೇವರನ್ನು ಅವಳು ದೂಷಿಸಬಹುದಿತ್ತು (ಕೆಲವರು ಮಾಡುವಂತೆ), ಆದರೆ ಅವಳು ತನ್ನ ನಂಬಿಕೆಯನ್ನು ಕಾದುಕೊಂಡಳು. ಅವಳ ದುರ್ದೈವಕ್ಕೆ ಕಾರಣನಾದ ಮನುಷ್ಯನ ದುರ್ದೆಶೆಯ ಸಾವಿಗೆ ಮತ್ತು ಭಯಂಕರವಾದ ಮರಣಕ್ಕೆ ಅವಳು ಸಂತೋಷಿಸಬಹುದಿತ್ತು, ಆದರೆ ಅವಳು ಹಾಗೆ ಮಾಡಲಿಲ್ಲ. ತನ್ನ ಬಗೆಗೆ ದುಃಖಪಡುವ ಬದಲು ಅವಳು ತನ್ನ ಅಸ್ವಸ್ಥನಾದ ಯಜಮಾನನಿಗಾಗಿ ಅವಳು ಕರುಣೆಪಟ್ಟಳು.

ಒಂದು ದಿನ ಅವಳು ನಾಮಾನನ ಹೆಂಡತಿಗಾಗಿ ತನ್ನ ಸೇವೆಯನ್ನು ಮಾಡುತ್ತಿದ್ದಾಗ - ಬಹುಶಃ ಅವಳು ತನ್ನ ಯಜಮಾನಿಯ ತಲೆಯನ್ನು ಬಾಚುತ್ತಿರುವಾಗ - ಆಗ ಅವಳು ನಾಮಾನನ ಹೆಂಡತಿಗೆ “ನಮ್ಮ ದಣಿಯು ಸಮಾರ್ಯದಲ್ಲಿರುವ ಪ್ರವಾದಿಯ ಹತ್ತಿರ ಇರುತ್ತಿದ್ದರೆ ಎಷ್ಟೋ ಒಳ್ಳೇಯದಾಗುತ್ತಿತ್ತು. ಅವನು ಇವನನ್ನು ಕುಷ್ಠರೋಗದಿಂದ ವಾಸಿ ಮಾಡುತ್ತಿದ್ದನು” (ವಚನ 3) ಎಂದು ಹೇಳಿದಳು. ಈ ಹುಡುಗಿಯು ಎಲೀಷನ ಬಗೆಗೆ ತಿಳಿದಿದ್ದಳು ಮತ್ತು ಪ್ರಾಚೀನ ಕಾಲದಲ್ಲಿನ ಭಯಹುಟ್ಟಿಸುವ ರೋಗಗಳನ್ನು ಆತನು ಗುಣಪಡಿಸುವವನಾಗಿದ್ದನು ಎಂದು ಆಕೆಯು ತಿಳಿದಿದ್ದಳು ಎಂಬುದನ್ನು ನಾನು ಕಂಡುಕೊಂಡೆನು. ಅವಳ ತಂದೆ ತಾಯಿಗಳು ಎಲೀಷನ ಪರಾಕ್ರಮದ ಕಥೆಗಳನ್ನು ಅವಳೊಡನೆ ಹಂಚಿಕೊಂಡಿರಬಹುದು. ಅವಳೇನೂ ಪರ ರಾಷ್ಟ್ರದಲ್ಲಿರಬಹುದು ಆದರೆ ತಾನು ಯಾರು ಎಂಬುದನ್ನು ಅವಳು ಮರೆತಿರಲಿಲ್ಲ; ಅವಳು ದೇವರಾದುಕೊಂಡ ಜನಾಂಗದ, ಶಕ್ತಿಯುತವಾದ ಪ್ರವಾದಿಯೊಡನೆ ಆಶೀರ್ವದಿಸಲ್ಪಟ್ಟ ಜನರ ಭಾಗವಾಗಿದ್ದಳು! ಮುಂದೆ, ಆ ಚಿಕ್ಕ ಹುಡುಗಿಯು ತನ್ನನ್ನು ಹಿಡಿದು ತಂದವರ ಜೊತೆ ತನ್ನ ನಂಬಿಕೆಯನ್ನು ಹಂಚಿಕೊಳ್ಳಲು ಬಯಸುವತ್ತ ಇದು ಸಾಗುವುದನ್ನು ನಾನು ಕಂಡುಕೊಳ್ಳುತ್ತೇನೆ. ನಾವು ಈ ದಾಸಿಯ ಬಗಗೆ ಸ್ವಲ್ಪವಾದದ್ದನ್ನು ಮಾತ್ರ ತಿಳಿಯುತ್ತೇವೆ, ಅವಳ ಹೆಸರು ಕೂಡ ನಮಗೆ ತಿಳಿಯದು, ಅವಳು ಹಳೆಯ ಒಡಂಬಡಿಕೆಯಲ್ಲಿ ದೇವರ ಬಲು ಗುರುತಾರವಾದ ವ್ಯಕ್ತಯಾಗಿದ್ದಾಳೆ.

ತನ್ನ ಸಹಜವಾದ ಹೇಳುವಿಕೆಯ ಪರಿಣಾಮವನ್ನು ಆ ಹುಡಿಗಿಯು ಅಚ್ಚರಿಯನ್ನು ತರುವಂತದ್ದನ್ನು ಕಾಣುತ್ತಾಳೆ. ನಾಮಾನನ ಹೆಂಡತಿಯು ಅವಳು ಹೇಳಿದುದ್ದನ್ನು ತನ್ನ ಗಂಡನಿಗೆ ಸ್ಪಷ್ಟವಾಗಿ ಹೇಳುತ್ತಾಳೆ, ಆ ಯೋಧನು ಅರಸನ ಹತ್ತಿರ ಹೊದನು. ಮತ್ತು ಆ

ಚಿಕ್ಕ ಹುಡುಗಿಯ ಮಾತುಗಳನ್ನು ಪುನರುಚ್ಚರಿಸಿದನು (ವಚನ 4). ಅರಸನು ಹಿಂದೆ ಮುಂದೆ ನೋಡದೇ ಅದ್ಭುತಕಾರ್ಯಗಳನ್ನು ಮಾಡುವ ಪ್ರವಾ ದಿಯ ಹತ್ತಿರ ಕಳುಹಿಸುವ ಯೋಜನೆ ಯನ್ನು ಮಾಡಿದನು (ವಚನ 5ಎ). ನೈಜ್ಯವಾದ ಸಂಗತಿಯೆಂದರೆ ನಾಮಾನನು ಆ ಚಿಕ್ಕ ದಾಸಿಯ ಸಲಹೆಯನ್ನು ಕೇಳಿದನು ಎಂಬುದು ಆತನ ನಿರಾಶೆಯನ್ನು ಸೂಚಿಸುವುದಾಗಿದೆ. ವಾಸ್ತವವೆಂದರೆ ಅರಸನು ನಾಮಾನನ ಅನ್ವೇಷಣೆಯನ್ನು ಪ್ರೇರೇಪಿಸಿದನು ಎಂಬುದು ತನ್ನ ದಂಡನಾಯಕನ ಬಗೆಗೆ ಇರುವ ಉಚ್ಛ ಗೌರವ ಮತ್ತು ಕಾಳಜಿಯನ್ನು ತೋರಿ ಸುವುದಾಗಿದೆ.

ದಬ್ಬಾಳಿಕೆಯ ಮನೋಭಾವನೆಯನ್ನು ಹೊಂದಿಕೊಂಡಿರುವ ಅರಸನು ತಾನುಬಯಸಿದ್ದನ್ನು ಸಾಧಿಸಲು "ಅಧಿಕೃತವಾದ" ವಾಹಿನಿಯ ಮೂಲಕ ಹೋಗುವುದನ್ನು ಆತನು ಬಯಸುವವನಾಗಿದ್ದನು. ಎಲೀಷನು ಇಸ್ರಾಯೇಲ್ಯರ ಅರಸನ ಆಸ್ಥಾನದ ಇತರ ಮಾಂತ್ರಿಕರ ಹಾಗೆ ಬಹುಶಃ ಆತನೂ ಒಬ್ಬನಾಗಿರಬಹುದು ಎಂದು ತಿಳಿದಿರಬಹುದು. ಹೀಗೆ ಆ ಅರಸನು ನಾಮಾನನಿಗೆ ಇಸ್ರಾಯೇಲ್ಯರ ಅರಸನ ಹತ್ತಿರ ಹೋಗಲು ನಿರ್ದೇಶಿಸಿದನು ಮತ್ತು ಇಸ್ರಾಯೇಲ್ಯನ ಅರಸನಿಗಾಗಿ ಪತ್ರವನ್ನು ಸಿದ್ಧಪಡಿಸಿದನು (ವಚನ 5ಎ).

"ಹಣವು ಏನನ್ನು ಬೇಕಾದರೂ ಕೊಂಡುಕೊಳ್ಳಬಹುದು" ಎಂಬುದು ಜಗತ್ ವ್ಯಾಪ್ತಿ ಯಾಗಿರುವುದರಿಂದ, ಪ್ರವಾದಿಯ ಈ ಕಾರ್ಯಕ್ಕೆ ತಾನು ಹಣವನ್ನು ಕೊಡುವದು ಅವಶ್ಯವಿದೆ ಎಂದು ನಾಮಾನನು ಭಾವಿಸಿದನು. ಆತನು "ಹತ್ತುತಲಾಂತು ಬೆಳ್ಳಿ, ಆರು ಸಾವಿರ ತೊಲೆ ಬಂಗಾರ, ಹತ್ತು ದಸ್ತು ಬಟ್ಟೆಗಳು" (ವಚನ 5ಸಿ) ಹೀಗೆ ಚಿಕ್ಕ ಕಾಣಿಕೆಯನ್ನು ಸಿದ್ಧಪಡಿಸಿದನು. ಹತ್ತು ತಲಾಂತು ತೂಕದ ಬೆಳ್ಳಿ ಅಂದರೆ 750 ಪೌಂಡು (340 ಕಿಲೋ ಗ್ರಾಂ) ಎಂದು ಆರು ಸಾವಿರ ತೊಲೆ ಬಂಗಾರವು ಸುಮಾರು 150 ಪೌಂಡ್ (70 ಕಿಲೋ ಗ್ರಾಂ)[9] ಎಂದು ಅಂದಾಜಿಸಲಾಗಿದೆ. ಬೆಳ್ಳಿಯ ಮೌಲ್ಯವು 20,000 ಮತ್ತು ಬಂಗಾರದ ಮೌಲ್ಯವು 60,000 ಎಂದು ಅಂದಾಜಿಸಲಾಗಿದೆ.[10] ಹತ್ತು ದಸ್ತುಬಟ್ಟೆಗಳು ಬಲು ಮೌಲ್ಯಯುಳ್ಳವಗಳು ಮತ್ತು ಉತ್ಸವಕ್ಕಾಗಿ ಅಥವಾ ರಾಷ್ಟ್ರೀಯ ಸಂದರ್ಭಗಳಲ್ಲಿ ಧರಿಸಬಹುದಾದ ದುಬಾರಿಯಾದ ದಿರಿಸಾಗಿದೆ.

**ಭಯಗ್ರಸ್ತನಾದ ಅರಸ**

ಎಲ್ಲವೂ ಸಿದ್ಧವಾದ ಮೇಲೆ ನಾಮಾನನು ಇವುಗಳನ್ನು ತೆಗೆದುಕೊಂಡು ಸಮಾರ್ಯಕ್ಕೆ ಹೊರಟುಹೋದನು (ವಚನ 5ಬಿ). ಆತನು ತನ್ನ ಛಾವಣಿಯ ಬಂಡಿಯೊಡನೆ ಸಮಾರ್ಯಪಟ್ಟಣಕ್ಕೆ ಹೊರಟನು. ಇಸ್ರಾಯೇಲ್ಯರ ರಾಜದಾನಿಯಾದ ಸಮಾರ್ಯವನ್ನು ಅವರು ದಕ್ಷಿಣ ಆಗ್ನೆಯದ ಕಡೆಗೆ ನೂರು ಮೈಲಿ ಅಥವಾ ಅದಕ್ಕಿಂತ ಹೆಚ್ಚು ದೂರ ಪ್ರವಾಣಿಸಿ ಕೊನೆಗೂ ತಲುಪಿದರು. ವಚನ 6 ಹೇಳುವುದೇನೆಂದರೆ "ಆತನು ಪತ್ರವನ್ನು [ಅರಾಮ್ಯರ ಅರಸನ ಕಡೆಯಿಂದ] ತೆಗೆದುಕೊಂಡು ಹೋಗಿ ಇಸ್ರಾಯೇಲ್ಯರ ಅರಸನ ಕೈಗೆ ಕೊಟ್ಟನು" (ವಚನ 6ಎ). ಇಸ್ರಾಯೇಲ್ಯರೂ ಮತ್ತು ಅರಾಮ್ಯರು ನಿರಂತರವಾಗಿ ಯುದ್ಧವನ್ನು ಮಾಡುತ್ತಿದ್ದುದರಿಂದ, ನಾಮಾನ ಮತ್ತು ಆತನ ಜೊತೆಯವರ ಮೇಲೆ ಆಗ ಅವರು ಯಾಕೆ ದಾಳಿಮಾಡಲಿಲ್ಲ ಅಥವಾ ಅವರು ದೇಶವನ್ನು ಪ್ರವೇಶಿಸುತ್ತಿರುವಂತೆಯೇ ಯಾಕೆ ಸೆರೆಹಿಡಿಯಲಿಲ್ಲ? ಬಹುಶಃ ಈ ಘಟನೆಯು ದಾಳಿಗೆ ಅಲ್ಪ ವಿರಾಮಕೊಟ್ಟ ಸಂದರ್ಭದಲ್ಲಿ ಇದು ಸಂಭವಿಸಿತು (ನೋಡಿರಿ 6:23ಬಿ). ಬಹುಶಃ ನಾಮಾನನು ಇಸ್ರಾಯೇಲಿನೊಳಗೆ ಬಂದಂತೆ, ಆತನು ಯುದ್ಧವಿರಾಮವನ್ನು ಸೂಚಿಸಿದನು[11] ಮತ್ತು ಅರಸನೊಡನೆ ಮಾತನಾಡುವ ಪರವಾನಿಗೆಯನ್ನು ಕೇಳಿದನು. ಯಾವುದೇ ಪರಿಸ್ಥಿತಿಯಲ್ಲಿ, ಆತನು ಅರಸನ ಅರಮನೆಯೊಳಗೆ ಪ್ರವೇಶಿಸಲು ಪರವಾನಿಗೆ ಮಾಡಿಕೊಂಡನು.

ನಾಮಾನನು ತನ್ನ ಸೇವಕರೊಡನೆ, ರಥಗಳು, ಕುದುರೆ ಮತ್ತು ಸಂಪತ್ತಿನ

ಹೊರೆಯನ್ನು ಹೊತ್ತ ಹೇಸರಗತ್ತೆಯೊಂದಿಗೆ ಸಮಾರ್ಯ ಪಟ್ಟಣದೊಳಕ್ಕೆ ಪ್ರವೇಶಿಸುವುದನ್ನು ಊಹಿಸಿಕೊಳ್ಳಿರಿ (ನೋಡಿರಿ 5:5ಬಿ, 9ಎ). ಆ ಮೆರವಣಿಗೆಯು ನೋಡಲು ಪಥಸಂಚಲನದಂತೆ ಇತ್ತು! ಅಲ್ಲಿ ಮುಖ್ಯವ್ಯಕ್ತಿಯಾಗಿ ಅಲ್ಲಿರುವ ಮನುಷ್ಯನ ದೇಹವನ್ನು "ಬಿಳೆಕುಷ್ಠವು" ಹಾಳುಮಾಡಿದ್ದನ್ನು ಆ ಊರ ಜನರು ವಿಸ್ಮಿತರಾಗಿ ನೋಡುತ್ತಿದ್ದರು. ಮೋಶೆಯ ಧರ್ಮಶಾಸ್ತ್ರವು ಕುಷ್ಠರೋಗಿಗಳನ್ನು ಉಳಿದ ಜನರಿಂದ ಬೇರ್ಪಡಿಸಿತ್ತು (ನೋಡಿರಿ ಯಾಜಕಕಾಂಡ 13:45, 46), ಆದರೆ ಇಲ್ಲಿ ಒಬ್ಬ ಕುಷ್ಠರೋಗಿಯು ನಿರಾಯಾಸವಾಗಿ ಅವರ ಓಣಿಗಳಲ್ಲಿ ಸವಾರಿಯಾಗಿ ಬರುತ್ತಿದ್ದಾನೆ!

ನಾಮಾನನು ಅರಮನೆಯನ್ನು ತಲುಪಿದೊಡನೆ, ಬಹುಶಃ ಆತನು ತಂದ ಸಂಪತ್ತು ತೋರಿಸುವಂತಹ ಆತನ ಸೇವಕರನ್ನು ಆತನು ಹೊಂದಿರಬಹುದು. ಆತನ ಪತ್ರವನ್ನು ಅರಸನ ಬಳಿಯಲ್ಲಿ ತೆಗೆದುಕೊಂಡು ಹೋದಂತೆ ಆತನು ಕಾದನು.

ಮುಂದಿನ ದೃಶ್ಯವು ಅರಸನ ಸಿಂಹಾಸನದ ಸ್ಥಳಕ್ಕೆ ಸ್ಥಳಾಂತರಿಸಲ್ಪಡುತ್ತದೆ. ರಾಯಭಾರದ ನಿಯೋಗವು ಬೆನ್ಹದದನ ಸಮಯದಿಂದಲೂ ನಡೆದುಬಂದಿತು ಎಂಬುದನ್ನು ಅರಸನು ಕೇಳಿದ್ದನು (1 ಅರಸು 20:2, 3 ರೊಂದಿಗೆ ಹೋಲಿಸಿರಿ) - ವಿಶೇಷವಾಗಿ ಈ ನಿಯೋಗವು ಇಸ್ರಾಯೇಲ್ಯರ ಸೈನಿಕರನ್ನು ಸೋಲಿಸಿದವನಿಂದ ನಡೆಸಲ್ಪಟ್ಟಿರುವುದರಿಂದ ಅರಸನು ಭಯಭೀತನಾದನು. ಈ ದ್ವೇಷಿಸಲ್ಪಟ್ಟ ಅರಾಮ್ಯನಿಗೆ ಬೇಕಾದದ್ದಾದರೂ ಏನು? ನಂತರ ಆಸ್ಥಾನದ ಅಧಿಕಾರಿಯು ಅರಾಮ್ಯ ಅರಸನ ಮುದ್ರೆ ಇರುವ ಪತ್ರವನ್ನು ಆತನಿಗೆ (ಇಸ್ರಾಯೇಲ ಅರಸನಿಗೆ) ಹಸ್ತಾಂತರಿಸಿದನು. ಅದನ್ನು ಓದಲು ಆರಂಭಿಸಿದಂತೆಯೇ ಅರಸನ ಕೈಗಳು ಕಂಪಿಸತೊಡಗಿದವೇ? ಆತನು ಬಹುಶಃ ಮೇಲಿಂದಮೇಲೆ ಅನಾವಶ್ಯಕವಾದ ರಾಜಕೀಯದ ಒಣಮಾತುಗಳನ್ನು ಓದಿದನು. ನಂತರ ಸಂದೇಶದ ಕೇಂದ್ರ ಭಾಗಕ್ಕೆ ಬಂದನು: "ನನ್ನ ಸೇವಕನಾದ ನಾಮಾನನನ್ನು ನಿನ್ನ ಬಳಿಗೆ ಕಳುಹಿಸಿದ್ದೇನೆ ನೀನು ಅವನ ಕುಷ್ಠರೋಗವನ್ನು ವಾಸಿಮಾಡತಕ್ಕದ್ದೆಂದು ಈ ಪತ್ರದಿಂದ ತಿಳಿದುಕೋ" (2 ಅರಸು 5:6ಬಿ).

"ಇಸ್ರಾಯೇಲ್ಯರು ಅರಸನು ಪತ್ರವನ್ನು ಓದಿದ ಕೂಡಲೆ ಬಟ್ಟೆಗಳನ್ನು ಹರಿದುಕೊಂಡನು" (ವಚನ 7ಎ; 2 ಸಮುವೇಲ 13:19; 2 ಪೂರ್ವಕಾಲವೃತ್ತಾಂತ 34:27; ಎಜ್ರ 9:3; ಯೆರಮೀಯ 36:24 ರೊಂದಿಗೆ ಹೋಲಿಸಿರಿ). ಆತನು ಬಲು ವಿಚಲಿತನಾದ ಅರಸನಾಗಿದ್ದನು! ಇಸ್ರಾಯೇಲ್ಯರ ಈ ಅರಸನು ಯಾರು ಎಂಬುದು ನಮಗೆ ತಿಳಿಯದು, ಆದರೆ ಬಹುಶಃ ಆತನು ನಾವು ಈ ಹಿಂದೆ ಯೋರಾಮದಲ್ಲಿ ಭೇಟಿಯಾದವನಿರಬಹುದು. ವಿವೇಕಶೂನ್ಯನಾದ ಆತನು "ತಾನು [ಅರಸನಾದ ಬೆನ್ಹದದ] ಕಳುಹಿಸಿದ ಮನುಷ್ಯನನ್ನು ಕುಷ್ಠದಿಂದ ವಾಸಿಮಾಡಬೇಕೆಂತೆ ನಾನೇನು ದೇವರೋ?" (2 ಅರಸು 5:7ಬಿ). ಆತನು ತನ್ನ ಮನದಲ್ಲಿ, ಒಂದೇ ಒಂದು ನಿರ್ಧಾರಕ್ಕೆ ಬಂದನು: "ಇವನು ನನ್ನೊಡನೆ ಜಗಳವಾಡುವುದಕ್ಕೆ ಕಾರಣ ಹುಡುಕುತ್ತಾನಲ್ಲದೆ ಮತ್ತೇನು?" (ವಚನ 7ನ್ನು; 1 ಅರಸು 20:7 ರೊಂದಿಗೆ ಹೋಲಿಸಿರಿ). ಒಂದು ಕುತೂಹಲಕಾರಿಯಾದ ಸಂಗತಿಯೆಂದರೆ, ನಾಮಾನನ ಕುಷ್ಠದ ವಿಚಾರವಾಗಿ, ಯೆಹೂದಿಯರ ಚಿಕ್ಕ ಹುಡುಗಿಯು ತಕ್ಷಣವೇ ಎಲೀಷನ ಬಗೆಗೆ ಯೋಚಿಸಿದಳೇ ಹೊರತು ಅರಸನನಲ್ಲ.

## ನಾಮಾನನ ಶುದ್ಧಿಕರಣ (5:8-14)

ಯಾವ ಸಂಗತಿಯು ಆಡಳಿತಗಾರನನ್ನು ವಿಚಲಿತಗೊಳಿಸುತ್ತದೆಯೊ ಆ ಸಂಗತಿಯು ಪ್ರಜೆಗಳನ್ನೂ ಕೂಡಾ ವಿಚಲಿತಗೊಳಿಸುತ್ತದೆ. ಪ್ರಖ್ಯಾತನಾದ ಈ ಅತಿಥಿಯ ಬರುವಿಕೆಯು ಪಟ್ಟಣದಲೆಲ್ಲೆ ಹರಡಿತು. ಈಗ ಅರಸನ ಸಿಟ್ಟಿಗೇಳುವಿಕೆಯು ವ್ಯಕ್ತಿಯಿಂದ ವ್ಯಕ್ತಿಗೆ ಹರಡಿ ಪ್ರವಾದಿಯ ಕಿವಿಗೆ ತಲುಪಿತು. "ಇಸ್ರಾಯೇಲ್ಯರ ಅರಸನು ತನ್ನ ಬಟ್ಟೆಗಳನ್ನು

ಹರಿದುಕೊಂಡನೆಂಬುದನ್ನು ದೇವರ ಮನುಷ್ಯನಾದ ಎಲೀಷನು ಕೇಳಿದೂತರ ಮುಖಾಂತರ ವಾಗಿ ಅವನಿಗೆ, ... ನೀನು ನಿನ್ನ ಬಟ್ಟೆಗಳನ್ನು ಹರಿದುಕೊಂಡದ್ದೇಕೆ?" (2 ಅರಸು 5:8ಎ) ಎಂದು ಹೇಳಿಕಳುಹಿಸಿದನು. ಅದಕ್ಕೆ ಆತನು ಅರಸನಿಗೆ ಉದ್ರೇಕಗೊಳ್ಳುವದು ಅವಶ್ಯವಿಲ್ಲ, ಅರಾಮ್ಯರಿಂದ ಇನ್ನು ಮುಂದೆ ಯಾವದಾಳಿಯೂ ಆಗದು ಎಂದು ಭರವಸೆಯನ್ನು ಕೊಟ್ಟನು. ಇದಕ್ಕೆ "ಅವನನ್ನು [ನಾಮಾನನನ್ನು] ನನ್ನ ಬಳಿಗೆ ಕಳುಹಿಸು; ಇಸ್ರಾಯೇಲ್ಯರಲ್ಲಿ ಒಬ್ಬ ಪ್ರವಾದಿಯಿದ್ದಾನೆಂಬುದು ಅವನಿಗೆ ಗೊತ್ತಾಗಲಿ" (ವಚನ 8ಬಿ) ಎಂದು ಹೇಳಿದನು. ಆತನ ಮಾತುಗಳು "ಮತ್ತು *ನೀನೂ ಸಹ* ಇಸ್ರಾಯೇಲ್ಯರಲ್ಲೊಬ್ಬ ಪ್ರವಾದಿಯು ಇದ್ದಾನೆ ಎಂಬುದನ್ನು ಅಂತಿಮವಾಗಿ ಕಲಿ" ಎಂದು ಸೂಚಿಸುವಂತಿದ್ದವು!

ಆ ಪತ್ರಕ್ಕೆ ಅರಸನ ಪ್ರತಿಕ್ರಿಯೆಯ ರೀತಿಯ ಮಾತು ಒಂದು ವೇಳೆ ನಾಮಾನನಿಗೆ ತಲುಪಿದ್ದೇ ಆದರೆ, ಆತನು ನಿರಾಶೆಯಿಂದ ತುಂಬಿದವನಾಗುತ್ತಿದ್ದನು. ಪ್ರವಾದಿಯ ಮನಗೆ ಹೋಗುವ ದಾರಿಯ ಮಾರ್ಗಸೂಚಿಯು ಆತನ ಕೊಡಲ್ಪಟ್ಟಾಗ ಹೇಗೋ ಆತನ ನಿರೀಕ್ಷೆಯು ಪುನಶ್ಚೇತನಗೊಂಡಿತು. ಅಷ್ಟೇ ಅಲ್ಲ ಆತನ ಹೆಂಡತಿಯ ದಾಸಿಯು ಸಮಾರ್ಯದಲ್ಲಿ ಒಬ್ಬ ಪ್ರವಾದಿಯೂ ಇದ್ದಾನೆ ಆತನು ವಾಸಿಮಾಡಬಲ್ಲನು ಎಂದು ಖಚಿತವಾಗಿ ಹೇಳಿದಳು. ನಾಮಾನನ ಪರಿವಾರವು ಅರಸನ ಅಂಗಳದಿಂದ ಹೊರಟಂತೆ, ಅರಸನು ಬಹುಶಃ ನಿರಾಶದ ಉಸಿರನ್ನು ಉಸಿರಾಡಿರಬಹುದು.

ತಿರುಗಿನಾನು ಹೀಗೆ ಊಹಿಸುತ್ತೇನೆ, ನಾಮಾನನ ಪರಿವಾರದ ಮೆರವಣಿಗೆಯ ಸಮಾರ್ಯದ ಓಣಿಗಳನ್ನು ದಾಟಿ ಮೊದಲು ಪ್ರಾರಂಭಿಸದಂತೆ ವಿನಮ್ರವಾದ ಎಲೀಷನ ಮನೆಯನ್ನು ಅದು ತಲುಪಿತು. "ನಾಮಾನನು ರಥರಥಾಶ್ವಗಳೊಡನೆ ಎಲೀಷನ ಮನೆಗೆ ಹೋಗಿ [ಅದೆಂದರೆ, ನಿಂತನು] ಬಾಗಿಲಿನ ಮುಂದೆ ನಿಂತನು" (ವಚನ 9). ಈ ಯೋಧನು ತನ್ನ ಸೇವಕರೊಡನೆ ಮತ್ತು ಸಂಪತ್ತಿನೊಡನೆ, ಪ್ರವಾದಿಯು ಅವನನ್ನು ಎದುರಾದಾಗ ಆತನ ಮುಂದೆ ಅವುಗಳನ್ನು ಇಡಲು ಸಿದ್ಧನಾಗಿ ನಿಂತುಕೊಂಡನು.

**ದೈವಿಕ ಪರಿಹಾರ**

ಹೇಗೋ, ಎಲೀಷನು ಒಂದು ಸಾರಿಯೂ ಸದೃಷ್ಯನಾಗಲಿಲ್ಲ. ಬದಲಾಗಿ, ಸಂದೇಶ ವನ್ನು (ವಚನ 20) ಬಹುಶಃ ಗೇಹಜಿಯೊಡನೆ (ವಚನ 10). ತನ್ನ ಸಂದೇಶವನ್ನು ಕಳುಹಿಸಿದನು. ಕೆಲ ಲೇಖಕರು ಪ್ರವಾದಿಯ ಅತಿಥಿ ಸತ್ಕಾರದ ಕೊರತೆಯ ಬಗೆಗೆ ಆಶ್ಚರ್ಯವ್ಯಕ್ತಪಡಿಸುತ್ತಾರೆ, ಆದರೆ ಘಟನಾವಳಿಯ ಸರಣಿಯನ್ನು ನೆನಪಿಸಿಕೊಳ್ಳುತ್ತಾರೆ. ನಾಮಾನನ ಹೃದಯವು ಆತನೇ ನಿಜವಾದ ದೇವರು ಎಂದು ಆತನ ಮುಂದೆ ಒಪ್ಪಿಕೊಳ್ಳಲು ಸಿದ್ಧವಾಗಬೇಕಿತ್ತು ಮತ್ತು ಮೊದಲನೆಯದಾಗಿ ಆ ದಂಡನಾಯಕನು ವಿನಮ್ರತೆಯನ್ನು ಕಲಿಯಬೇಕಿತ್ತು (ಲೂಕ 14:11). ಆತನ ದೇಹವು ಚಿಕ್ಕ ಮಗುವಿನಂತೆ ಆಗುವ ಮೊದಲು (2 ಅರಸು 5:14), ಆತನ ಹೃದಯವು ಆ ಚಿಕ್ಕ ಮಗುವಿನಂತೆ ಆಗಬೇಕಿತ್ತು (ಮತ್ತಾಯ 18:3, 4).

ಗೇಹಜಿಯ ಸಂದೇಶವು ಇದನ್ನು ತಂದಿತ್ತು: "ಹೋಗು ಯೊರ್ದನ್ ಹೊಳೆಯಲ್ಲಿ ಏಳು ಸಾರಿ ಸ್ನಾನ ಮಾಡು; ಆಗ ನಿನ್ನ ದೇಹವು ಮುಂಚಿನಂತಾಗುವದು; ನೀನು ಶುದ್ಧನಾಗುವಿ" (2 ಅರಸು 5:10ಬಿ). "ತೊಳೆದುಕೋ" ಎಂಬ ಪದಕ್ಕೆ ಇಲ್ಲಿ "ಮುಣುಗಿಸು"[12] ಎಂದಿದೆ. ವಚನ 14ರಲ್ಲಿ, "ಆತನು ಮುಣುಗಿದನು" ಎಂದು ಹೇಳುತ್ತದೆ; CJB ಹೇಳುವುದೇನೆಂದರೆ ಆತನು ತನ್ನಷ್ಟಕ್ಕೆ ತಾನೇ ನೀರೆರಚಿಕೊಂಡಿದ್ದರೆ, "ನಿನ್ನ ದೇಹವು ಮುಂಚಿನಂತಾಗುವದು ಮತ್ತು *ಕಂಡಿತ* ನೀನು ಶುದ್ಧನಾಗುವಿ" ಎಂದು ದೇವರು ಅದರ ಫಲಕ್ಕೆ ಖಚಿತತೆಯನ್ನು ಕೊಡುತ್ತಿದ್ದನೇನೋ (ಒತ್ತಿ ಹೇಳಿದ್ದು ನನ್ನದು).

ಏಳು ಸಾರಿಯು ಮುಳುಗುವುದು ಏಕೆ ಅವಶ್ಯವಿದೆ? ಸಂಖ್ಯೆ "ಏಳು" ವೇದ ಭಾಗದಲ್ಲಿ ಪದೆಪದೇ ಸಿಕ್ಕುವದವಾಗಿದೆ (ನೋಡಿರಿ ಆದಿಕಾಂಡ 2:2; ಯೆಹೋಶುವ 6:4) ಮತ್ತು ಇದು

ಸದಾಪರಿಪೂರ್ಣತೆ ಅಥವಾ ಸಂಪೂರ್ಣತೆಯ ವಿಚಾರವನ್ನು ಹೊಂದಿರುವುದಂತಾದ್ದಾಗಿದೆ. ಈ ಪ್ರಕರಣದಲ್ಲಿ, ನಂಬಿಕೆಯು ಮುಳುಗುವ ಸಮಯದಲ್ಲಿ ಇದ್ದು ನಂತರ ಏನೂ ಸಂಭವಿಸದೇ ಇದ್ದಾಗ ಇದು ಕಾಣಿಸಿಕೊಳ್ಳುವ ಕಾರಣ ದ್ವಿಗುಣವಾದ ಮುಳುಗಿಸುವಿಕೆಯು ಬಹುಶಃ ಆಜ್ಞೆಮಾಡಲ್ಪಟ್ಟದ್ದು ಆಗಿದೆ.

**ಪ್ರಾರಂಭದ ಪ್ರತಿಕ್ರಿಯೆ**

ನಾಮಾನನಿಗೆ ಕೊಡಲ್ಪಟ್ಟ ಸೂಚನೆಗಳಿಗೆ ಆತನು ಹೇಗೆ ಪ್ರತಿಕ್ರಿಯಿಸಿದನು? ಆತನು "ಕೋಪಗೊಂಡನು" (ವಚನ 11ಎ)! ಆತನು ಪ್ರವಾದಿಯ ನಡವಳಿಕೆಯಿಂದ ಅವಮಾನಿತನಾದನು. ದಂಡನಾಯಕನಾದಂತಹ ಆತನು, ಪ್ರಮುಖನಾದ ವ್ಯಕ್ತಿಯಾಗಿದ್ದನು; ಈ ತರದ ವರ್ತನೆಯು ಆತನಿಗೆ ರೂಢಿಯಿರಲಿಲ್ಲ! ಮುಂದೆ, ಆತನು ಪ್ರವಾದಿಯ ಸೂಚನೆಗಳಿಂದ ಅವಮಾನಿತನಾದನು. ಆತನು,

> ಇದೇನು! "ಅವನು ಹೇಗೂ ಹೊರಗೆ ಬಂದು ನಿಂತು ತನ್ನ ದೇವರಾದ ಯೆಹೋವನ ಹೆಸರು ಹೇಳಿ[13] ಕುಷ್ಠದ ಮೇಲೆ ಕೈಯಾಡಿಸಿ ವಾಸಿ ಮಾಡುವನೆಂದು" ನೆನಸಿದೆನು. ದಮಸ್ಕದ ಅಬಾನಾ, ಪರ್ಪರ್ ಎಂಬ ಹೊಳೆಗಳು ಇಸ್ರಾಯೇಲ್ಯರ ಎಲ್ಲಾ ಹೊಳೆ ಹಳ್ಳಗಳಿಗಿಂತ ಉತ್ತಮವಾಗಿವೆಯಲ್ಲವೋ? ಸ್ನಾನದಿಂದ ವಾಸಿಯಾಗುವ ಹಾಗಿದ್ದರೆ ನಾನು ಅವುಗಳಲ್ಲಿಯೇ ಸ್ನಾನ ಮಾಡಬಹುದಲ್ಲವೇ? (ವಚನಗಳು 11ಬಿ, 12ಎ).

"ದಮಸ್ಕದ ಶುದ್ಧ ನದಿಗಳು ಹಿಮಚ್ಛಾದಿತ ಅಮ್ಮಾನಸ್ ಬೆಟ್ಟದಿಂದ ... ಅಥವಾ ಹೆರ್ಮೋನ ಬೆಟ್ಟಗಳಿಂದ ಹರಿಯುತ್ತಿದ್ದವು."[14] ಒಂದು ವೇಳೆ ಸ್ನಾನಮಾಡುವುದೇ ಅವಶ್ಯವಾಗಿದ್ದರೆ, ಆ ನದಿಗಳು ನಿಶ್ಚಿತವಾಗಿ "ಕೆಸರು ಯುಕ್ತವಾದ ಮತ್ತು ಪ್ರಕ್ಷುಬ್ಧವಾದ"[15] ಯೋರ್ದನ ಹೊಳೆಗಿಂತ ಬಲು ಯೋಗ್ಯವಾಗಿ ಕಂಡುಬರುತ್ತಿತ್ತು.

ನಾಮಾನನು ಅಲ್ಲಿಂದ ಹೊರಟುಬಿಡುವುದಕ್ಕೆ ಸಿಟ್ಟಿನಿಂದ ಆಜ್ಞೆಯನ್ನು ಕೊಟ್ಟನು. ಆತನು ತನ್ನ ರಥವನ್ನು ತಿರುಗಿಸಿಕೊಂಡು "ಬಲು ಸಿಟ್ಟಿನಿಂದ ಹೊರಟುಹೋದನು" (ವಚನ 12ಬಿ). ಆ ರಥವು ಅಲ್ಲಿಂದ ಹೊರಟಂತೆ ಎಲೀಷನು ಓಡಿ ಹೊರಗೆ ಬರಲಿಲ್ಲ ಅಥವಾ ಅವರನ್ನು ನಿಲ್ಲಿಸಲೂ ಇಲ್ಲ. ಆತನು ನಾಮಾನನಿಗೆ ಪರಿಹಾರವನ್ನು ಸೂಚಿಸಿದ್ದನು, ಆದರೆ ಅದನ್ನು ಒಪ್ಪಿಕೊಳ್ಳಲು ಆತನು ಒತ್ತಾಯಿಸಲು ಹೋಗಲಿಲ್ಲ. ಆ ಯೋಧನು ತನ್ನ ಮುಂದಿನ ಜೀವಿತ ದುದ್ದಕ್ಕೂ ಕುಷ್ಠರೋಗಿಯಾಗಿಯೇ ಉಳಿಯುವ ಹಂತದಲ್ಲಿದ್ದನು!

ಅದೃಷ್ಟವಾಶಾತ್, ಆತನ ತಂಡದಲ್ಲಿ ಕೆಲವರು ಬಲು ಸ್ಪಷ್ಟವಾಗಿ ಯೋಚಿಸು ವವರಿದ್ದರು. ಒಬ್ಬ ಸೇವಕನು ದಂಡನಾಯಕನನ್ನು ಪ್ರವಾದಿಯೆಡೆಗೆ ನಡೆಸಿದನು; ಈಗ ಮತ್ತೊಬ್ಬ ಸೇವಕನು ಪ್ರವಾದಿಯ ಸೂಚನೆಗಳಿಗೆ ವಿಧೇಯನಾಗಲು ಪ್ರಚೋದಿಸುತ್ತಿದ್ದಾನೆ: "ಈ ಹೆಸರಿಲ್ಲದ ನಾಯಕರುಗಳು ನಾಮಾನನಿಗೆ ಅಪ್ಪನವರೇ [ವಾತ್ಸಲ್ಯ ಮತ್ತು ಗೌರವದ ಸೂಚ್ಯಕವಾಗಿತ್ತು], ಪ್ರವಾದಿಯು ಒಂದು ಕಠಿಣವಾದ ಕೆಲಸವನ್ನು ಹೇಳಿದ್ದರೆ ಅದನ್ನು ಮಾಡುತ್ತಿದ್ದಿರಲ್ಲಾ?" (ವಚನ 13ಎ). ಅಂದರೆ ಅವರು ತಮ್ಮ ಯಜಮಾನನಿಗೆ, "ಒಂದು ವೇಳೆ ಪ್ರವಾದಿಯು ಒಂದು (ಘೋರವಾದ) ಮಿತಿಮೀರಿದ ಖರ್ಚುದಾಯಕವಾದ ಅಥವಾ ಬಲು ಕಷ್ಟದಾಯಕವಾದ ಅಥವಾ ನಂಬಲಾರದಷ್ಟು ಅಪಾಯಕಾರಿಯಾಗಿದ್ದ ಸಂಗತಿಯನ್ನು ಮಾಡಲು ಹೇಳಿದ್ದರೆ ಮಾಡುತ್ತಿದ್ದಿರಲ್ಲವೇ? ಈ ಭಯಂಕರವಾದ ರೋಗದಿಂದ ವಾಸಿ ಯಾಗಲು ಏನಾದರೂ ಮಾಡಲು ನೀವು ಸಿದ್ಧರಾಗುತ್ತಿದ್ದಿರಲ್ಲವೇ?" ಎಂದು ಅವರು ಹೇಳಿ ದರು. ನಾಮಾನನು ತನ್ನ ತಲೆಯನ್ನು ಮನಸ್ಸಿಲ್ಲದೇ ಆಡಿಸಿರಬಹುದು.

ಆ ಸೇವಕರುಗಳು ಮುಂದುವರೆಸುತ್ತಾ, "ಸ್ನಾನಮಾಡಿ ಶುದ್ಧನಾಗು" ಎಂದು ಹೇಳಿದರೆ ಯಾಕೆ ಅದರಂತೆ ಮಾಡಬಾರದು? (ವಚನ 13ಬಿ) ಎಂದು ಹೇಳಿದರು. ಇನ್ನೊಂದು ಮಾತಿನಲ್ಲಿ

ದುಬಾರಿಯಾದುದರ ಬದಲಾಗಿ ನಿನಗೆ ಇದನ್ನು ಮಾಡಲು ಹೇಳಿದ್ದು, ಇದಕ್ಕೆ ಯಾವ ಕ್ರಯವೂ ಇಲ್ಲ ಕೇವಲ ಇದು ಸಮಯವನ್ನು ತೆಗೆದುಕೊಳ್ಳುವಂತದ್ದಾಗಿದೆ. "ಕಠಿಣ ವಾದಂಥವುಗಳ ಬದಲಾಗಿ ಇದನ್ನು ತೆಗೆದು ಕೊಳ್ಳಲು ಹೇಳಿ ದಂಥ, ಈ ಸೂಚನೆಗಳು ಸ್ಪಷ್ಟವೂ, ಸರಳವೂ, ಮತ್ತು ಅನುಸರಿಸಲು ಸರಾಗವೂ ಆಗಿವೆ. ನೀನು ಅಪಾಯಕಾರಿಯಾದ ಸಂತಿಗೆಳೆಡೆಗೆ ಹೋಗು ಎಂದು ಹೇಳುವುದರ ಬದಲಾಗಿ, ಇಲ್ಲಿರುವ ಒಂದೆ ಅಪಾಯ ಎಂದರೆ ಹಾಸ್ಯಕ್ಕೊಳಗಾಗುವ ಸಾಧ್ಯತೆ ಮತ್ತು ನಿರಾಶೆಯಿಂದ ಅಂತ್ಯಗೊಳ್ಳುವಿಕೆಯ ಸಾಧ್ಯತೆಗಳೆ ಆಗಿವೆ. ಈಗಾಗಲೇ ನೀನು ಈ ಸ್ಥಳವನ್ನು ಮುಟ್ಟಲು ಉದ್ದವಾದ ಮತ್ತು ಕಠಿಣಮಯವಾದ ಯಾತ್ರೆಯನ್ನು ಮಾಡಿದ್ದಿ. ಇನ್ನು ಕೇವಲ ಇಪ್ಪತ್ತು ಮೈಲಿಗಳ ಪ್ರಯಾಣ ಮಾಡಿ ಪ್ರವಾದಿಯು ಏನನ್ನು ಹೇಳುತ್ತಾನೋ ಅದನ್ನು ಮಾಡುವದು ದೊಡ್ಡ ಕೆಲಸವೋ? ನಿನ್ನ ಗರ್ವವು ಕಳೆದುಹೋಗುವುದನ್ನು ಬಿಟ್ಟರೆ ಮತ್ತೇನನ್ನು ನೀನು ಕಳಕೊಳ್ಳುವಿ?"

**ಅಂತಿಮ ಫಲಿತಾಂಶ**

ವಿವೇಚನೆಯುಳ್ಳ ಸೇವಕರುಗಳ ಮಾತುಗಳು ನೆರವೇರಿದವು. ಉತ್ತರ ದಮಸ್ಕಕ್ಕೆ ತಲೆಹಾಕುವ ಬದಲು, ನಾಮಾನ ಮತ್ತವನ ಪರಿವಾರವು ಸಮಾರ್ಯದ ಎತ್ತರ ಪ್ರದೇಶ ಗಳಿಂದ - ಇಳಿಮುಖವಾದ ಒಂದೇ ಸಮನೆ ಬರುವ ಘಟ್ಟಗಳ ಮೂಲಕವಾಗಿ - ಸುಮಾರು ಸಾವಿರ ಅಡಿ ಆಳವಿರುವ ಯೊರ್ಧನಿನ ಆಳವಾದ ಘಟಕ್ಕೆ ಅವರು (ಯೊರ್ದನಿಗೆ) "ಇಳಿದು ಹೋದರು" (ವಚನ 14ಎ). ಆ ಪ್ರದೇಶವು ಪರವಾನಿಗೆ ಕೊಟ್ಟಂತೆ, ಪ್ರಯಾಣದ ಒಂದು ದಿನ ಅಥವಾ ಎರಡು ದಿನ ತೆಗೆದುಕೊಳ್ಳ ಬಹುದ್ದಾದರಿಂದ ಆತನು ತ್ವರೆಯಿಂದ ಮುಳುಗಿ ಎದ್ದನು.

ತಿರುಗಿ, ನಾಮಾನ ಮತ್ತು ಆತನ ಪರಿವಾರವು ಯೋರ್ದನ್ನಿನ ತೀರದ ಮೇಲೆ ನಿಲುಗಡೆ ಮಾಡಿಕೊಂಡಿದ್ದರೆ ಚಿತ್ರಣವನ್ನು ನಿಮ್ಮ ಮನದಲ್ಲಿ ಮಾಡಿಕೊಳ್ಳಿರಿ. ನಾಮಾನನು ತನ್ನ ಮಿಲಿಟರಿ ಪೋಷಾಕನ್ನು ತೆಗೆದು ಹಾಕಿದನು. ಮತ್ತು ನೀರಿನಲ್ಲಿ ಇಳಿದು ಕೊಳಕಾದ ನೀರಿನಲ್ಲಿ ಇಳಿದ ನಾಮಾನನ್ನು ನೋಡಿರಿ. ಆತನ ಮುಖವು ಅವಮಾನದಿಂದ ಕೆಂಪಗಾಗಿರಬಹುದೇ? ಒಬ್ಬರಿಗೊಬ್ಬರೂ ಕುಚೋದ್ಯದಿಂದ ನಕ್ಕಿರುವುದನ್ನು ಆತನು ಕೇಳಿರಬಹುದು ಅಥವಾ ಅವರೊಳಗೆ ಆಳುಗಳು ದಡದ ಮೇಲೆ ಸೇರಿರುವುದನ್ನು ಆತನು ನೋಡಿರಬಹುದೇ? ಅದು ನಿಜವೇ ಆಗಿದ್ದರೂ, ಹೇಗೋ ಆತನು ಕೇವಲ ತಲೆ ಮತ್ತು ಭುಜ ನೀರಿನಿಂದ ಹೊರಗೆ ಬಂದಾಗ ಮಾತ್ರ ಅದನ್ನು ಕೇಳುತ್ತಿದ್ದನು. ನಂತರ ಆತನು ತನ್ನ ಕಣ್ಣುಗಳನ್ನು ಮುಚ್ಚಿದನು, ಉಸಿರನ್ನು ಹಿಡಿದುಕೊಂಡನು, ಮತ್ತು ನೀರಿನೊಳಗೆ ಮುಳಿಗಿದನು. ಆತನು ನೀರಿನ ಮೇಲೆ ಬಂದನು ಮತ್ತು ನೀರಿನೊಳಗೆ ಇಳಿದನು, ನೀರು ಆತನ ಮುಖದ ಸುತ್ತಲೂ ಸುತ್ತುತಿತ್ತು. ಮತ್ತು ಆತನ ಉಸಿರು ಹೊರಬರುತ್ತಿತ್ತು. ಆತನು ಕೂದಲಿನಿಂದ ನೀರನ್ನು ಜಾಡಿಸಿದನು, ಕಣ್ಣನ್ನು ತಿಕ್ಕಿಕೊಂಡನು, ಮತ್ತು ನಂತರ ತಿರುಗೊಂದಾವರ್ತಿ ತನ್ನನ್ನು ತಾನೇ ನೀರಿನಲ್ಲಿ ಮುಳುಗಿಸಿಕೊಂಡನು. ಎರಡು ಸಾರಿ, ಮೂರನೆಯ ಸಾರಿ ನಾಲ್ಕು ಐದು, ಆರು - ಮತ್ತೇ ಹಾಗೂ ಮತ್ತೇ ಆತನು ನೀರಿನ ಅಡಿಯಲ್ಲಿ ಮುಳುಗಿ ಎದ್ದನು.

ಅಂತಿಮವಾಗಿ, ಆತನು ಏಳನೆಯ ಸಾರಿಯದಕ್ಕೆ ಹೋದನು. ಈ ಸಾರಿ, ಆತನು ಹೊರಬಂದಾಗ, ಒಂದು ಅದ್ಭುತವಾದ ಸಂಗತಿಯು ಸಂಭವಿಸಿತ್ತು! ವೇದಭಾಗ ಹೇಳುವುದೇ ನೆಂದರೆ, "ಅವನು ಯೊರ್ದನನಿಗೆ ಹೋಗಿ ಏಳು ಸಾರಿ ಅದರಲ್ಲಿ ಮುಳುಗಿ ಎದ್ದನು. ಕೂಡಲೆ ದೇವರ ಮನುಷ್ಯನ ಮಾತಿಗನುಸಾರವಾಗಿ ಅವನ ದೇಹವು ಕೂಸಿನ ದೇಹದಂತೆ ಶುದ್ಧ ವಾಯಿತು!" (ವಚನ 14). ಆತನ ಕುಷ್ಠವ್ಯಾಧಿ ವಾಸಿಯಾದದ್ದಲ್ಲದೆ ಆತನ ಸಮಯವನ್ನು ಹಾಳುಮಾಡುವುದು ಕೂಡ ನಿಂತುಹೋಯಿತು. ಆದರೆ "ಚಿಕ್ಕ ಮಗುವಿನ ದೇಹದಂತೆ ಇತ್ತು"!

## ನಾಮಾನನ ಪರಿವರ್ತನೆ (5:15-19ಎ)

ನಾಮಾನನ ದೇಹವು ನಾಟಕೀಯವಾಗಿ ಬದಲಾವಣೆಯನ್ನು ಹೊಂದಿತು - ಆದರೆ ಆತನು ತನ್ನ ಪುನಶ್ಚೇತನವಾದ ದೇಹವನ್ನು ಆಶ್ಚರ್ಯದಿಂದ ನೋಡಿದನು. ಒಂದು ಗುರುತರವಾದ ಪರಿವರ್ತನೆಯು ಆತನ ಮನದಲ್ಲಿ ಮತ್ತು ಆತನ ಹೃದಯದಲ್ಲಿ ಉಳಿಯಿತು. ಯೆಹೋವನ ಪ್ರವಾದಿಯು ಇತರರು ಮಾಡಲು ಅಸಮರ್ಥವಾದಂತಹದ್ದನ್ನು ಮಾಡಿದನು. ಅರಾಮ್ಯರ ದೇವರ ಪೂಜಾರಿಗಳು ಮಾಡಲು ಆಗದಿದ್ದನು ಮಾಡಿದನು. ನಾಮಾನನು ಸಾಧ್ಯವಿರುವ ಒಂದೇ ಒಂದು ತೀರ್ಮಾನಕ್ಕೆ ಬಂದನು: ಎಲೀಷನೇ ನಿಜ ದೇವರಾದ - ಯೆಹೋವನ ನಿಜ ಪ್ರವಾದಿಯಲ್ಲೊಬ್ಬನು ಆಗಿದ್ದಾನೆ ಎಂಬುದೇ!

ಈ ಘಟನೆಯನ್ನು ಮನದಲ್ಲಿ ಚಿತ್ರಿಸಿಕೊಳ್ಳಲು ಪ್ರಯತ್ನಿಸಿರಿ. ಸಂಪೂರ್ಣವಾಗಿ ಬೆಂಡಾದ ಒಬ್ಬ ಮನುಷ್ಯನು ಆ ಸ್ಥಳಕ್ಕೆ ಬಂದನು, ನೆಲಕ್ಕೆ ಬಿದ್ದು ಸಾಷ್ಟಾಂಗವೆರಗಿದನು, ಮತ್ತು ಭೂಮಿಯ ಮೇಲೆ ನಿಶಬ್ಧವಾಗಿ ಬಿದ್ದು ಕೊಂಡು ಕೃತಾಜ್ಞಾತಾಪೂರ್ವಕವಾಗಿ ಕಣ್ಣೀರಿನಿಂದ ದೇವರಿಗೆ ಪ್ರಾರ್ಥಿಸಿದನು. "ಓ ದೇವರೇ ನೀನೆಂಥ ಅದ್ಭುತನು!" ಎಂದು ಆತನ ಮನದಲ್ಲಿ ಉದ್ಘರಿಸಿರಬಹುದು. ನಾಮಾನನು ಧೂಳಿನಿಂದ ಎದ್ದನು, ತನ್ನ ಬಟ್ಟೆಗಳನ್ನು ಬದಲಾಯಿಸಿದನು, ನವ ಯೌವನದ ಚೈತನ್ಯದಿಂದ ರಥವನ್ನು ಏರಿದನು, ಮತ್ತು ಸಮಾರ್ಯಕ್ಕೆ ಮರಳುವ ಆಜ್ಞೆಯನ್ನು ಕೊಟ್ಟನು. "ಸಮಾರ್ಯಕ್ಕೆ ಮರಳಿರಿ!" ಎಂಬ ಪದಗಳು ಹೊರಬಂದವು ಮತ್ತು ಆತನ ಗುಂಪು ಚಲಿಸಿತು. ಇದೊಂದು ವಿಜಯೋತ್ಸವದ ಮೆರವಣಿಗೆಯಾಗಿತ್ತು - ಅದು ನಾಮಾನನದಲ್ಲ ಆದರೆ ದೇವರದು![16]

**ಅಪೂರ್ವವಾದ ಅರಿಕೆ**

ಅಲ್ಲಿ ಯೋರ್ದನ ಹೊಳೆಯಿದೆ, ನಾಮನನು ಈಗಾಗಲೇ ಅರಾಮ್ಯಕ್ಕೆ ಹೋಗುವ ನಾಲ್ಕನೆಯ ಒಂದನೆಯ ಭಾಗವನ್ನು ಕ್ರಮಿಸಿ ಆಗಿದೆ; ತಕ್ಷಣವೇ ದಮಸ್ಕಕ್ಕೆ ಹಿಂತಿರುಗಿ ಒಳ್ಳೇಯ ಸುದ್ಧಿಯನ್ನು ಹಂಚಿಕೊಳ್ಳುವ ಬದಲಾಗಿ, ಆತನು ತನ್ನ ಪ್ರಶಂಶೆಯನ್ನು ವ್ಯಕ್ತಪಡಿಸಲು ಮತ್ತು ತನ್ನ ಹೊಸದಾಗಿ ಹುಟ್ಟಿದ ನಂಬಿಕೆಯನ್ನು ಧ್ವನಿಸಲು ಆತನು ತನ್ನ ಹೆಜ್ಜೆಯನ್ನು ಹಿಂದಿರುಗಿಸಿದನು. "ಅನಂತರ ಅವನು ತನ್ನ ಪರಿವಾರದೊಡನೆ ಹಿಂದುರುಗಿ ದೇವರ ಮನುಷ್ಯನ ಹತ್ತಿರ ಹೋದನು" (ವಚನ 15ಎ).

ಈ ಸಾರಿ ಎಲೀಷನು ಆತನನ್ನು ಭೇಟಿಯಾಗಲು ಹೊರಗೆ ಬಂದನು, ಮತ್ತು ನಾಮಾನನು "ದೇವರ ಮನುಷ್ಯನ ಹತ್ತಿರ ಹೋಗಿ ಅವನ ಮುಂದೆ ನಿಂತನು" (ವಚನ 15ಬಿ). ಆಯೋಧನ ಧ್ವನಿಯು ಸಂಪೂರ್ಣವಾಗಿ ಭಾವೋದ್ವೇಗದಿಂದ ತುಂಬಿರಲೇಬೇಕು ಆತನು ಹೇಳಿದಂತೆ, "ಇಸ್ರಾಯೇಲ್ ದೇಶದಲ್ಲಿರುವ ದೇವರ ಹೊರತಾಗಿ ಲೋಕದಲ್ಲಿ ಬೇರೆ ದೇವರು ಇರುವದೇ ಇಲ್ಲವೆಂಬುದು ಈಗ ನನಗೆ ಗೊತ್ತಾಯಿತು" ಎಂದು ಹೇಳಿದನು (ವಚನ 15ಸಿ). ಆತನ ಅರಿಕೆಯು ಅದ್ಭುತವಾದದ್ದು; ಆತನು ಯೆಹೋವನನ್ನು ಕೇವಲ ಇಸ್ರಾಯೇಲ್ಯರ ದೇವರನ್ನಾಗಿ ಕಾಣಲಿಲ್ಲ ಆದರೆ "ಈ ಎಲ್ಲಾ ಜಗತ್ತಿಗೆ" ಆತನೊಬ್ಬನೇ ದೇವರಾಗಿದ್ದಾನೆ ಎಂಬುದನ್ನು ಆತನು ಕಂಡುಕೊಂಡನು! ಅರಿವಿಲ್ಲದ ಸಮಯದಲ್ಲಿ, ಆತನು ಯೆಹೋವನ ಸಾರ್ವತ್ರಿಕ ಸ್ವಭಾವವನ್ನು ಅರಿತುಕೊಂಡನು! ಆತನ ಮಾತಿನಲ್ಲಿ "ಬಾಳನ ಮತ್ತು [ಯೆಹೋವನ] ಇಬ್ಬರೂ ದೇವರಾಗಿದ್ದಾರೋ ಅಥವಾ [ಯೆಹೋವನ] ಇಬ್ಬರೂ ದೇವರಾಗಿದ್ದಾರೋ ಅಥವಾ [ಯೆಹೋವನು] ಒಬ್ಬನೇ ದೇವರಾಗಿದ್ದಾನೋ ಎಂಬ ವಿಷಯದಲ್ಲಿನ ಹೊಯ್ದಾಟದ ಅಭಿಪ್ರಾಯವನ್ನು ಮುಂದುವರಿಸಿದಂತಹ ಇಸ್ರಾಯೇಲ್ಯರು ನಾಚಿಕೆಪಟ್ಟುಕೊಳ್ಳಬೇಕು"[17] ಎಂದಾಗಿರಬೇಕು.

ತನ್ನ ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾ, ನಾಮಾನನು ಎಲೀಷನಿಗೆ ತಂದ ಬಂಗಾರವನ್ನು ಬೆಳ್ಳಿಯನ್ನೂ, ಅಮೂಲ್ಯವಾದ ಬಟ್ಟೆಗಳನ್ನೂ ಕೊಡಲು ಪ್ರಯತ್ನಿಸುತ್ತಾನೆ: "ನೀನು

ದಯವಿಟ್ಟು ಕಾಣಿಕೆಯನ್ನು ಅಂಗೀಕರಿಸಬೇಕು" (ವಚನ 15ಡಿ). ಹೇಗೋ, ಪ್ರವಾದಿಯು ಅದನ್ನು ತಿರಸ್ಕರಿಸಿದನು "ನಾನು ಸನ್ನಿಧಿ ಸೇವೆ ಮಾಡುತ್ತಿರುವ ಯೆಹೋವನಾಣೆ, ನಿನ್ನಿಂದ ಏನೂ ತೆಗೆದುಕೊಳ್ಳುವುದಿಲ್ಲ" (ವಚನ 16ಎ) ಆ ಯೋಧನು ಆತನನ್ನು ಒತ್ತಾಯಿಸುತ್ತಲೇ ಹೋದನು, ಆದರೆ ಆತನು ಆ ಕಾಣಿಕೆಯನ್ನು ತಿರಸ್ಕರಿಸುತ್ತಲೇ ಹೋದನು (ವಚನ 16ಬಿ).

ಇಂತಹ ಸ್ಥಿತಿಯಲ್ಲಿ ಕಾಣಿಕೆಯನ್ನು ಸ್ವೀಕರಿಸುವುದಕ್ಕೆ ಎಲೀಷನು ವಿರೋಧಿಯಾಗಿರಲಿಲ್ಲ (ನೋಡಿರಿ 4:8-11, 42), ಆದರೆ ನಾಮಾನನಿಂದ ಏನನ್ನಾದರೂ ತೆಗೆದುಕೊಂಡಿದ್ದಾದರೆ ಅದು ವೈಯಕ್ತಿಕವಾದ ಸ್ವೀಕರಿಸುವಿಕೆಯಾಗುತ್ತದೆ ಎಂದು ಆತನು ಬಾವಿಸಿದ್ದನು. ಅರಾಮ್ಯರ ಸುಳ್ಳು ಪ್ರವಾದಿಗಳಂತೆ ಅವನು ಕೂಲಿಯಾಳಲ್ಲ ಎಂದು ನಾಮಾನನು ಅರಿತುಕೊಳ್ಳಬೇಕೆಂದು ಆತನು ಬಯಸಿರಬಹುದು. ಆತನು ದೇವರಲ್ಲಿಲ್ಲ, ಈ ಅಭಿಪ್ರಾಯವನ್ನು ಆತನ ಮೇಲೆ ಬಿಡಲು ಬಯಸಲಿಲ್ಲ.

**ಅಸಾಮಾನ್ಯವಾದ ವಿನಂತಿ**

ಕಥೆಯ ಈ ಭಾಗವು ನಾಮಾನನ ವಿನಂತಿಯೊಡನೆ ಮುಕ್ತಾಯವಾಗುತ್ತದೆ. ಮೊದಲು ಆತನು ಎಲೀಷನಿಗೆ, "ನೀನು ನನ್ನದನ್ನು ಸ್ವೀಕರಿಸದಿದ್ದರೆ ನಿನ್ನ ಸೇವಕನಾದ ನನಗೆ ಎರಡು ಹೇಸರಕತ್ತೆಗಳು ಹೊರುವಷ್ಟು ಮಣ್ಣನ್ನು ಕೊಡಿಸಬೇಕು ... ನಾನು ಇನ್ನು ಮುಂದೆ ಎಲ್ಲಾ ದೇವತೆಗಳನ್ನೂ ಬಿಟ್ಟು ಯೆಹೋವನೊಬ್ಬನಿಗೇ ಸರ್ವಾಂಗ ಹೋಮ ಯಜ್ಞಗಳನ್ನು ಸಮರ್ಪಿಸಬೇಕೆಂದಿರುತ್ತೇನೆ" (ವಚನ 17). ಬಹುಶಃ ನಾಮಾನನು ಯಜ್ಞ ವೇದಿಯನ್ನು ಕಟ್ಟುವ ಸಾಮಾಗ್ರಿಗಾಗಿ ಆ ಮಣ್ಣನ್ನು ಬಯಸಿರಬಹುದು (ವಿಮೋಚನಾಕಾಂಡ 20:24ರ ಜೊತೆ ಹೋಲಿಸಿರಿ), ಅಥವಾ ಯೆಹೋವನಿಗೆ ಯಜ್ಞವನ್ನು ಅರ್ಪಿಸುವ ವೇದಿಗೆ ತಳಪಾಯವಾಗಿರಲು ಆತನು ಬಯಸಿರಬಹುದು. ಈ ಅಸಂಗತ ವಿನಂತಿಗೆ ಸಹಜವಾದ ವಿವರಣೆಯೆಂದರೆ ಯೆಹೋವನೊಬ್ಬನೇ ನಿಜವಾದ ದೇವರು ಮತ್ತು ಆತನಿಗಾಗಿ ಯಜ್ಞವನ್ನು ಅರ್ಪಿಸುವುದಕ್ಕೆ ಇಸ್ರಾಯೇಲ್ಯರ ಮಣ್ಣು ಅವಶ್ಯ ಎಂದು ಯೋಧನು ಅರಿತಿದ್ದನು - ಆದರೆ ಇದು ಯೆಹೋವನು ಸಾರ್ವತ್ರಿಕ ದೇವರು ಎಂದು ಅರಿತುಕೊಳ್ಳುವಿಕೆಯಲ್ಲಿ ಆತನಿಗೆ ಸಂಘರ್ಷವನ್ನು ಉಂಟು ಮಾಡಬಹುದಿತ್ತು (ವಚನ 15). ಇದರಿಂದ ಒಂದಂತೂ ಸ್ಪಷ್ಟವಾಗಿ ಕಾಣಿಸುತ್ತದೆ, ಅದು ಇಸ್ರಾಯೇಲಿನ ಭೂಮಿಯು ಕೆಲದೃಷ್ಟಿಯಿಂದ ವಿಶೇಷವಾದದ್ದು, ಯಾಕೆಂದರೆ ಇದು ನಿಜವಾದ ದೇವರೊಂದಿಗೆ ಸಂಬಂಧವನ್ನು ಹೊಂದಿದೆ ಎಂದು ನಾಮಾನನು ಯೋಚಿಸಿದನು (ವಿಮೋಚನಾಕಾಂಡ 3:5 ರೊಡನೆ ಹೋಲಿಸಿರಿ) - ಮತ್ತು ಅದರಲ್ಲಿ ಕೆಲವನ್ನು ಮನೆಗೆ ತೆಗೆದುಕೊಂಡು ಹೋದನು. ಇದನ್ನು ನಾವು "ಪವಿತ್ರ ಭೂಮಿಗೆ" ಪ್ರತಿವರ್ಷ ಹೋಗಿ ಬರುವವರಿಂದ ತೆಗೆದುಕೊಳ್ಳುವ ನೆನಪಿನ ಗುರುತನ್ನು ಇದಕ್ಕೆ ಹೋಲಿಸಬಹುದು.

ನಾಮಾನನು ಯಾವುದೋ ಒಂದನ್ನು ಆತನಿಗೆ ಆಸಕ್ತಿಯುತವಾದಂತದ್ದನ್ನು ತನ್ನ ಮನದಲ್ಲಿ ಇರಿಸಿಕೊಂಡಿದ್ದನು. ಎಲೀಷನೆಡೆಗೆ ತಿರುಗಿ ಬರುವಾಗ ಆತನ ನಂಬಿಕೆ ಮತ್ತು ರಾಜಕೀಯ ಕಾರ್ಯಗಳ ಮಧ್ಯೆ ಸಂಘರ್ಷ ಏರ್ಪಟ್ಟದ್ದು ಆತನ ಮನಕ್ಕೆ ನೆಟ್ಟಹಾಗಾಯಿತು. ಪ್ರಾಚೀನ ಜಗತ್ತಿನಲ್ಲಿ, ರಾಜ್ಯಗಳ "ಆಳ್ವಿಕೆ" ಮತ್ತು ರಾಜ್ಯಗಳ "ದೇವರು" ಅಥವಾ "ದೇವತೆಗಳ" ಮಧ್ಯೆ ಬಿಗಿಯಾದ ಬಂದವಿರುತ್ತಿತ್ತು. ಆತನ ಅಧಿಕೃತ ಪಾತ್ರವನ್ನು ಪರಿಪೂರ್ಣಗೊಳಿಸುವ ಅಂದರೆ ಅರಸನೊಡನೆ ವಿಗ್ರಹಗಳ ದೇವಾಲಯಕ್ಕೆ ಹೋಗುವಂತಹದ್ದನ್ನು ಒಳಗೊಂಡಂತಹ ಸಂಗತಿಗಳನ್ನು ಯೆಹೋವನು ಖಂಡಿಸಬಹುದಲ್ಲವೇ? ಆದ್ದರಿಂದ ಆತನು ಎಲೀಷನಿಗೆ "ಈ ವಿಷಯದಲ್ಲಿ ಯೆಹೋವನು ನನ್ನನ್ನು ಕ್ಷಮಿಸಲಿ; ನನ್ನ ಒಡೆಯನು ಆರಾಧನೆಗೋಸ್ಕರ ರಿಮ್ಮೋನನ ದೇವಸ್ಥಾನಕ್ಕೆ ಹೋಗಿ ನನ್ನ ಕೈ ಹಿಡಿದು[18] ಆ ದೇವತೆಗೆ ನಮಸ್ಕಾರ ಮಾಡುವಾಗ ನಾನೂ ನಮಸ್ಕಾರ ಮಾಡಬೇಕಾಗುವದು ಈ ಒಂದು ವಿಷಯದಲ್ಲಿ ಮಾತ್ರ ಯೆಹೋವನು

ನನಗೆ ಕ್ಷಮೆಯನ್ನು ಅನುಗ್ರಹಿಸಲಿ" (ವಚನ 18) ಎಂದು ಬೇಡಿಕೊಂಡನು. ರಿಮ್ಮೋನನು ಅರಾಮ್ಯರಿಗೆ ಬಾಳನಿಗೆ ಸಮಾನವಾದ ದೇವರು ಆಗಿದ್ದು ಅರಾಮ್ಯದ ಪ್ರಮುಖ ದೇವರಲ್ಲಿ ಒಬ್ಬನಾಗಿದ್ದನು. ಆದರೆ ಅವರ ತತ್ವಗಳು ಒಂದೇ ಆಗಿರಲಿಲ್ಲ.

ತನ್ನ ಹೊಸದಾಗಿ ಕಂಡುಕೊಂಡಂತಹ ನಂಬಿಕೆಯೊಡನೆ ಸ್ಥಿರ ಜೀವಿತವನ್ನು ಜೀವಿಸುವ ಮತ್ತು ಅದಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗೆಗೆ ಕಾಳಜೀ ಪೂರಕವಾಗಿರುವ ಸವಾಲನ್ನು ನಾಮಾನನು ಅರಿತುಕೊಂಡಿದ್ದನ್ನು, ನಾನು ಶ್ಲಾಘಿಸುವವನಾಗಿದ್ದೇನೆ. ಇಂದು, ಕರ್ತನೆಡೆಗೆ ಬರುವಂತವರು ತಾವು ಜೀವಿಸಬಹುದಾದ ಹೊಸ ಜೀವಿತವು (ರೋಮಾಪುರ 6:3, 4) ಮತ್ತು ಇದು ಅವರ ಹಿಂದಿನ ಜೀವನ ಶೈಲಿಗೆ ಹೇಗೆ ಸಂಘರ್ಷಕ್ಕೆಡೆ ಮಾಡುವದು ಎಂಬುದರ ಬಗೆಗೆ ಅಲ್ಪ ಅರಿವನ್ನು ಹೊಂದಿದವರಾಗುತ್ತಾರೆ.

ಹೇಗೋ, ವಚನ 18ರಲ್ಲಿನ ನಾಮಾನನ ಮಾತಿನ ಪ್ರಕಾರ, ನಾನು ಜೋರಾಗಿ ಹೇಳ ಬಯಸುತ್ತೇನೆ, "ನೀವು ಪ್ರಸ್ತಾಪಿಸಬೇಕೆಂದಿರುವದು ಅಪಾಯಕಾರಿಯಾದುದು ಎಂಬುದು ನಿಮಗೆ ಅರ್ಥವಾಗದೇ? ಒಂದು ವೇಳೆ ರಿಮ್ಮೋನನು ದೇವರು ಎಂದು ನೀವು ನಂಬದಿದ್ದರೆ ಆತನಿಗೆ ಯಜ್ಞವನ್ನು ಅರ್ಪಿಸಬಾರದು (ನೋಡಿರಿ ವಚನ 15), ಆತನ ದೇವಸ್ಥಾನಕ್ಕೆ ಹೋಗಿ ಆತನಿಗೆ ಸಾಷ್ಟಾಂಗವೆರಗಿದ್ದಾದರೆ, ಅದು ಆತನನ್ನು ಆರಾಧಿಸಿದ ಹಾಗೆ ಕಂಡು ಬರುತ್ತದೆ. ಹೀಗೆ ನೀವು ಇತರರ ಮೇಲೆ ಹೊಂದಿದ ಸಕಾರಾತ್ಮಕ ಪ್ರಭಾವವನ್ನು ನಿರರ್ಥಕಗೊಳಿಸೀರಿ. ಮುಂದೆ, ರಿಮ್ಮೋನನ ಆರಾಧನೆಗೆ ವಿಸ್ತರಿಸಲ್ಪಟ್ಟ ಪ್ರಕಟಪಡಿಸುವಿಕೆಯು ವಿಗ್ರಹಾರಾಧನೆಗೆ ನಿಮ್ಮನ್ನು ಎಳೆದು ತರಬಹುದು. "ವಿಗ್ರಹಾರಾಧನೆಗೆ ಸಂಬಂಧಿಸಿದಂತಿರುವ ಯಾವುದನ್ನೇ ಆಗಲಿ ಮತ್ತು ಪ್ರತಿಯೊಂದರಿಂದಾಗಲಿ ನಿಮ್ಮನ್ನು ನೀವು ದೂರವಿರಿಸಿಕೊಳ್ಳಿರಿ ಎಂದು ನಾನು ನನ್ನ ಹೃದಯದಿಂದ ನಿಮ್ಮನ್ನು ಬೇಡಿಕೊಳ್ಳುತ್ತೇನೆ!"

ಅಂತೆಯೇ ನಾನು ಹೇಗೆ ಪ್ರತಿಕ್ರಯಿಸುತ್ತಿದ್ದೇನೋ, ಆದರೆ ಎಲೀಷನು ಸರಳವಾಗಿ ಹೇಳಿದನು "ಸಮಾಧಾನದಿಂದ ಹೋಗು" (ವಚನ 19ಎ). ಪ್ರವಾದಿಯು ನಾಮಾನನಿಗೆ ರಿಮ್ಮೋನನ ದೇವಸ್ಥಾನಕ್ಕೆ ಹೋಗಲು ಸಮ್ಮತಿಸಿದನು ಎಂದು ಕೆಲವರು ಇದನ್ನು ಅರ್ಥೈಸುತ್ತಾರೆ. ಇನ್ನೂ ಸ್ವಲ್ಪ ಜನ ತಮ್ಮ ತಪ್ಪುಗಳೊಡನೆ ರಾಜಿಯಾಗುವುದಕ್ಕಾಗಿ ಬಳಸಿಕೊಳ್ಳಲು ಇದನ್ನು ಸಮಜಾಯಿಸಿಕೊಳ್ಳುತ್ತಾರೆ. ಹೇಗೋ ಎಲೀಷನ ಈ ಹೇಳಿಕೆಯ ಸಮ್ಮತಿಯನ್ನಾಗಲಿ ಮತ್ತು ಅಸಮ್ಮತಿಯನ್ನಾಗಲೀ ಹೊರಗಡೆಹುವದಿಲ್ಲ.[19] ಇದೊಂದು ಕೇವಲ ಇಬ್ರಿಯ ಭಾಷೆಯ "ಬೀಳ್ಕೊಡುವ ಪದವಾಗಿದೆ."[20]

ಎಲೀಷನು ನಾಮಾನನು ರಿಮ್ಮೋನನ ದೇವಸ್ಥಾನಕ್ಕೆ ಹೋಗುವುದನ್ನು ನಿಲ್ಲಿಸುವದಕ್ಕೆ ಯಾಕೆ ಒತ್ತಿಹೇಳಲಿಲ್ಲ ಎಂಬುದು ಇನ್ನೂ ಪ್ರಶ್ನೆಗಳನ್ನು ಇರಿಸುವಂತಹದ್ದಾಗಿದೆ. ಆತನ ಮೌನಕ್ಕೆ ಸಾಧ್ಯತೆಯಿರುವ ಅಂಶಗಳು ಇಲ್ಲಿವೆ:

- ಆ ಕ್ಷಣಕ್ಕೆ, ನಾಮಾನನು ಮಾಡಿದಂತಹ ಅದ್ಭುತವಾದ ಆತ್ಮೀಕ ಪ್ರಗತಿಯಿಂದ ಆತನು ಪುಳಕಗೊಂಡಿದ್ದನು. ಇದು ಕರ್ತನ ದೊಡ್ಡ ವಿಜಯವಾಗಿತ್ತು!
- ನಾಮಾನನು ನಂಬಿಕೆಗೆ ಇನ್ನೂ ಹೊಸಬನು ಎಂಬುದನ್ನು ಎಲೀಷನು ಬಲ್ಲವನಾಗಿದ್ದನು ಮತ್ತು ಆ ಯೋಧನ ಮೇಲೆ ಆ ಕ್ಷಣದಲ್ಲಿ ಆತನು ಹೊರಲು ಸಾಧ್ಯವಾದದಕ್ಕಿಂತ ಹೆಚ್ಚಿನ ಭಾರವಾದ ಆತ್ಮೀಕ ಕಟ್ಟಳೆಗಳನ್ನು ಆತನ ಮೇಲೆ ಹೊರಿಸ ಬಯಸಲಿಲ್ಲ. ಒಂದು ಹೊಸ ಸಸ್ಯವು ಮೃದುವಾಗಿ ಬೆಳಸಲ್ಪಡಬೇಕಿತ್ತು.
- ನಾಮಾನನು ಈಗಾಗಲೇ ಸಾಕಷ್ಟು ಸಂಘರ್ಷಗಳನ್ನು ತನ್ನ ಕಾರ್ಯಗಳಲ್ಲಿ ನೋಡಿದ್ದರಿಂದ, ಆತನು ಆತ್ಮೀಕವಾಗಿ ಬೆಳೆಯುವುದನ್ನು ಮುಂದುವರೆಸುವದನ್ನೂ ಮತ್ತು ಕ್ರಮವಾಗಿ ತನ್ನಷ್ಟಕ್ಕೆ ತಾನೇ ಸರಿಯಾದ ಸಮಾರೋಪಕ್ಕೆ ಬರುವನು ಎಂದು

ಎಲೀಷನಿಗೆ ನಂಬಿಕೆ ಇತ್ತು.

ಎಲೀಷನು ಯಾಕೆ ಹಾಗೆ ನಿಭಾಯಿಸಿದನು ಎಂಬುದಕ್ಕೆ ಮೇಲಿನ ಸಂಗತಿಗಳು ಬಹುಶಃ ಪರಿಣಾಮ ಬೀರಿರಬಹುದು. ಇಂದಿಗೂ ಕೂಡ, ದೀಕ್ಷಾಸ್ನಾನ ಮಾಡಿಸುವ ಮೊದಲು ಆತನು ತಿಳಿದುಕೊಳ್ಳಬೇಕಾದ ಎಲ್ಲಾ ವಿಷಯಗಳನ್ನೂ ನಾವು ತಿಳಿಸುತ್ತಿಲ್ಲ. ಕೆಲ ಬೋಧನಾಂಶಗಳು - *ಹೆಚ್ಚಿನ* ಬೋಧನಾಂಶಗಳು - ಇವುಗಳು ದೀಕ್ಷಾಸ್ನಾನದ *ನಂತರ* ಆ ಜಾಗೆಯನ್ನು ಪಡೆಯುತ್ತವೆ (ಮತ್ತಾಯ 28:19, 20).

## ಮುಕ್ತಾಯ (5:19ಬಿ)

ನಂತರ ಎಲೀಷನು "ಸಮಾಧಾನದಿಂದ ಹೋಗು" ಎಂದು ಹೇಳಲು ಅವನು ಅರಾಮ್ಯಕ್ಕೆ ಹಿಂತಿರುಗಿ "ಹೊರಟುಹೋದನು" (2 ಅರಸು 5:19ಬಿ). ಈ ಪಾಠವನ್ನುನಾವು ಮುಗಿಸುತ್ತಿದ್ದಂತೆ, ಆತನು ಹಿಂದುರುಗಿ ದಮಸ್ಕಕ್ಕೆ ತಲುಪುವುದರ ಬಗೆಗೆ ನಾವು ಯೋಚಿಸಬೇಕು ಎಂದು ನಾನು ಬಯಸುವವನಾಗಿದ್ದೇನೆ. ಆತನಿಗೆ ಸಮಾರ್ಯದಲ್ಲಿನ ಪ್ರವಾದಿಯ ಹತ್ತಿರ ಹೋಗಲು ಆ ಚಿಕ್ಕ ಹುಡುಗಿ ನಿರ್ದೇಶನದ ದೃಷ್ಟಿಯಿಂದ ಆ ಘಟನೆಯ ಘಟನಾವಳಿಗಳನ್ನು ಊಹಿಸಿಕೊಳ್ಳಲು ಪ್ರಯತ್ನಿಸಿರಿ:

> ತನ್ನ ಸಲಹೆಯಿಂದ ಹುಟ್ಟಿದ ಸಂಭ್ರಮಕ್ಕೆ ಅವಳು ಆಶ್ಚರ್ಯಚಕಿತಳಾದಳು. ನಾಮಾನನು ಮತ್ತವನ ಸಂಗಡಿಗರು ಪಟ್ಟಣದಿಂದ ಹೊರಟಂತೆ ಅವಳೂ ಕೂಡ ತನ್ನ ಯಜಮಾನಿಯೊಡನೆ ನಿಂತಿದ್ದಳು, ದಂಡನಾಯಕನ ಮುಖವು ಆ ರೋಗದಿಂದ ಹಾಳುಬಿದ್ದಂತಿತ್ತು ಆದರೆ ಅಲ್ಲಿ ಖಚಿತತೆ ಇತ್ತು. ದಿನಗಳು ಕಳೆದಂತೆ, ಅಲ್ಲಿ ಸಂಭವಿಸಿದ್ದುದನ್ನು ಕಂಡು ಅವಳು ಆಶ್ಚರ್ಯಚಕಿತಳಾದಳು ಮತ್ತು ಅನೇಕ ಉತ್ಸಾಹಪೂರಿತ ಪ್ರಾರ್ಥನೆಗಳನ್ನು ಅವಳು ಮಾಡಿದಳು. ಒಂದು ದಿನ ಅವಳು ದಂಡನಾಯಕನಾದ ನಾಮಾನನು ಮರಳಿದ ಕೂಗನ್ನು ಕೇಳಿದಳು. ಅವಳು ಊರಿನಾಚೆ ಓಡಿದಳು. ಮೊದಮೊದಲು ಅವಳು ತನ್ನ ಯಜಮಾನನ ಗುರುತನ್ನು ಹಿಡಿಯಲಿಲ್ಲ. ಆತನ ಚರ್ಮವು ಶುದ್ಧವಾಗಿತ್ತು, ಆತನ ಕಣ್ಣುಗಳು ಹೊಳೆಯುತ್ತಿದ್ದವು, ಮತ್ತು ಮುಗುಳ್ನಗೆಯು ಆತನ ಮುಖದ ತುಂಬೆಲ್ಲಾ ಹರಡಿತ್ತು. ಆತನ ರಥವು ಅಲ್ಲಿ ಬಂದು ನಿಂತಂತೆ ಆತನು ಕೆಳಕ್ಕಿಳಿದನು, ಅವಳಿರುವಲ್ಲಿ ಬಂದನು, ಬೊಗ್ಗಿಕೊಂಡನು ಮತ್ತು ಗಂಭೀರವಾಗಿ ಹೇಳಿದನು. "ವಂದನೆಗಳು" ಸಾಯಂಕಾಲ, ನಾಮಾನನು ತನ್ನ ಕುಟುಂಬವನ್ನು ಯೆಹೋವನಿಗೆ ಪ್ರಾರ್ಥಿಸುವುದಕ್ಕಾಗಿ ಸೇರಿಸುವಂತೆ ಅವಳಿಗೆ ಹೇಳಿದನು. ಅವಳು ಆ ಗುಂಪಿಗೆ ಬಲು ಹತ್ತಿರವಾಗಿ ಕೂತಿರುವಂತೆ, ಅವಳು ತನ್ನ ಸ್ವಂತ ಸ್ತೋತ್ರದ ಪ್ರಾರ್ಥನೆಯನ್ನು ಯೆಹೋವನಿಗೆ ಸಲ್ಲಿಸಿದಳು. ಅವಳು ತಿರುಗಿ ದೇವರಲ್ಲಿ ಭಯಭಕ್ತಿಯುಳ್ಳ ಕುಟುಂಬದ ಸಂತೋಷದಲ್ಲಿರುವ ಒಂದು ಭಾಗವಾದಳು![21]

ಒಬ್ಬ ವಿಗ್ರಹಾರಾಧಕನನ್ನು ನಂಬಿಕೆಗೆ ತರುವಲ್ಲಿ ಆತನ ಜೀವಿತದಲ್ಲಿ ದೇವರು ಕಾರ್ಯಮಾಡಿದನು. ಒಂದು ವೇಳೆ ನೀವು ಕರ್ತನಲ್ಲಿ ನಂಬಿಕೆಯಿಡದೆ ಹೋದರೆ ಅಥವಾ ಆತನಿಗೆ ವಿಧೇಯರಾಗದೆ ಹೋದರೆ, ಆತನು ತನ್ನೆಡೆಗೆ ನಿಮ್ಮನ್ನು ತರುವುದಕ್ಕಾಗಿ ಪ್ರಯತ್ನಿಸಲು ನಿಮ್ಮ ಜೀವನದಲ್ಲಿ ಕಾರ್ಯವನ್ನು ಮಾಡುತ್ತಾನೆ. ಆತನಿಗಾಗಿ ನಿಮ್ಮ ಅವಶ್ಯಕತೆಯು ಇರುವುದನ್ನು ನಿಮಗೆ ಎಚ್ಚರಿಸುವುದಕ್ಕಾಗಿ ಆತನು ಈ ಪಾಠದ ಮೂಲಕ ನಿಮ್ಮ ಹೃದಯದೊಂದಿಗೆ ಕಾರ್ಯಮಾಡುವವನಾಗಿದ್ದಾನೆ. ನೀವು ದೇಹದಿಂದ ಕುಷ್ಠರೋಗಿಯಾಗಿರದೆ ಇರಬಹುದು, ಆದರೆ ಸೌಲನು "ಪಾಪವೆಂದು" ಕರೆಯುವ "ಕೊಳಕು ಹುಣ್ಣನ್ನು" (ಕ್ಯಾನ್ಸರ್) ನೀವು ಹೊಂದಿರಬಹುದು (ರೋಮಾಪುರ 3:23) - ಮತ್ತು ಅದು ಯಾವುದೆ ವೈದ್ಯಕೀಯ ಚರ್ಮರೋಗಕ್ಕಿಂತಲೂ ಕೆಟ್ಟದ್ದಾದದ್ದು ಆಗಿದೆ (6:23). ನಾಮಾನನು ತನ್ನ

ಗರ್ವವನ್ನು ಬದಿಗಿಟ್ಟನು ಮತ್ತು ದೇವರು ಆಜ್ಞಾಪಿಸಿದ್ದನ್ನು ಮಾಡಿದನು. ನೀನೂ ಸಹ ಅದನ್ನೇ ಮಾಡು ಎಂದು ನಾನು ಪ್ರಾರ್ಥಿಸುವವನಾಗಿದ್ದೇನೆ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38)!

---

ಟಿಪ್ಪಣಿಗಳು

[1]ಈ ಪಾಠಕ್ಕಾಗಿ ತೆಗೆದುಕೊಳ್ಳಲಾದ ಮುಖ್ಯ ಶೀರ್ಷಿಕೆಗಳು ಜೈಮ್ಸ್ E. ಸ್ಮಿತ್ ಅವರ, *The Books of History*, Old Testament Survey Series ನಿಂದ ತೆಗೆದುಕೊಳ್ಳಲಾಗಿದೆ (Joplin, Mo.: College Press Publishing Co., 1995), 563, 565. [2]Henry Blunt, *Lectures on the History of Elisha* (Philadelphia: Herman Hooker, 1839), 83; Adam Clarke, *The Holy Bible with a Commentary and Critical Notes*, vol. 2, *Joshua–Esther* (New York: Abingdon-Cokesbury Press, n.d.), 495. [3]ಒಂದು ವಾದದ ಪ್ರಕಾರ ಈ ಸಮಾರೋಪವು ಇತರ ಯೆಹೂದಿ ಕುಷ್ಠರೋಗಿಗಳು ಪ್ರತ್ಯೇಕವಾಗಿರುವಂತೆ ನಾಮಾನನು ಇದ್ದನು ಎಂದು ಕಣಿಸಿಲ್ಲ. ಹೇಗೋ ಅರಾಮ್ಯರು ಯೆಹೂದಿಗಳು ಮೋಶೆಯ ಧರ್ಮಶಾಸ್ತ್ರಕ್ಕೆ ಕೊಟ್ಟಂತೆ ಅರಾಮ್ಯರು ಆರೋಗ್ಯ ಮತ್ತು ಆರೋಗ್ಯತತ್ವಗಳಿಂದ ಪ್ರಭಾವಿತರಾಗಿರಲಿಲ್ಲ. [4]Merrill F. Unger, *The New Unger's Bible Dictionary*, ed. R. K. Harrison (Chicago: Moody Press, 1988), 357. [5]J. J. Reeve, “Elisha,” *The International Standard Bible Encylopedia,* ed. James Orr (Grand Rapids, Mich.: Wm. B. Eerdmans Publishing Co., 1939), 2:935. [6]Clyde M. Miller, *First and Second Kings,* The Living Word Commentray series, vol. 7 (Abliene, Tex.: A.C.U. Press, 1991), 332. [7]C. F. Keil and F. Delitzsch, “1 and 2 Kings,” *Commentary on the Old Testament*, vol. 3, *1 and 2 Kings, 1 and 2 Chronicles, Ezra, Nehemiah, Esther* (Peabody, Mass.: Hendrickson Publishers, 1989), 317. [8]ಈ ದಿನಗಳಲ್ಲಿ ಯೆಹೂದಿಗಳು ಮತ್ತು ಅರಬರ ಮಧ್ಯದ ಗಡಿ ಅನಿಶ್ಚಿತವಾದ ವಿವಾದವು ನಮ್ಮಲ್ಲಿನ US ವೀಕ್ಷಕರಿಗೆ ಚಿರಪರಿಚಿತವಾಗಿದೆ. ನಿಮ್ಮ ಕೇಳುಗರಿಗೆ ಚಿರಪರಿಚಿತವಾದ ಹೋಲಿಕೆಯನೂ ಅಥವಾ ದೃಷ್ಟಾಂತವನ್ನೋ ಬಳಸಿರಿ. [9]NIV ಅಡಿ ಟಿಪ್ಪಣಿಯಲ್ಲಿ ಕೊಡಲಾದ ಈ ಮಾಹಿತಿಯು ನನ್ನ ಸೇರಿಸುವಿಕೆಯಾಗಿದೆ. CJB ಯಲ್ಲಿ “660 ಪೌಂಡ್ ಬೆಳ್ಳಿ” ಎಂದಿದೆ. [10]ಈ ಬೆಲೆಬಾಳುವ ವಸ್ತುಗಳ ಬೆಲೆಯನ್ನು ನಿಮ್ಮ ಸ್ಥಳದಲ್ಲಿ ಇರುವಂಥ ಬೆಲೆಬಾಳುವ ವಸ್ತುಗಳ ಜೊತೆ ವ್ಯವಹರಿಸುತ್ತಿರುವವರ ಜೊತೆ ಇದರ ಮೌಲ್ಯವನ್ನು ಪರೀಕ್ಷಿಸಬಹುದು.

[11]US ವೀಕ್ಷಕರು ಯುದ್ಧವನ್ನು ನಿಲ್ಲಿಸುವ ಧ್ವಜದೊಡನೆ ಚಿರಪರಿಚಿತರಾಗಿದ್ದಾರೆ. ನೀವು ಇರುವೆಡೆಯಲ್ಲಿ ಇದಕ್ಕೆ ಹೋಲಿಕೆಯಾದ ಉದ್ದೇಶಗಳಿಗಾಗಿ ವಿವಿಧ ರೀತಿಯ ಸಂಕೇತಗಳು ಇರಬಹುದು. [12]James A. Montgomery, “Kings,” *International Critical Commentary* (Edinburgh: T. & T. Clark, 1951), 375; quoted in James Burton Coffman and Thelma B. Coffman, *Commentary on Second Kings*, James Burton Coffman Commentaries, The Historical Books, vol. 6 (Abilene, Tex.: A.C.U. Press, 1992), 68. [13]ನಾಮಾನನು ದೇವರ ಪವಿತ್ರವಾದ ಹೆಸರನ್ನು (NASB ಯಲ್ಲಿ ಸರಳವಾಗಿ “ಕರ್ತನು” ಎಂದು ಭಾಷಾಂತವಾಗಿದೆ) ಕಥೆಯ ಉದ್ದಕ್ಕೂ ಬಳಸಿದ್ದಾನೆ. ಇಸ್ರಾಯೇಲ್ಯರ ದೇವರ ಬಗೆಗೆ ಆತನಿಗೆ ಅಲ್ಪವಾದರೂ ಜ್ಞಾನವಿತ್ತು. ಇದನ್ನು ಆತನು ಆ ಚಿಕ್ಕ ಹುಡುಗಿಯಿಂ ದೇನಾದರು ಕಲಿತಿರಬಹುದೇ? [14]Donald J. Wiseman, *1 and 2 Kings: An Introduction and Commentary*, Tyndale Old Testament Commentaries (Downers Grove, Ill.: Inter-Varsity Press, 1993), 207. [15]E. K. Vogel, “Jordan” in *The International Standard Bible Encyclopedia,* rev., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:1122. [16]ಇಲ್ಲಿನ ಹೆಚ್ಚಿನ ಪದಪುಂಜಗಳನ್ನು F. W. Krummacher, *Elisha, a Prophet for Our Times* (Grand Rapids, Mich.: Kregal Publications, 1993), 152-53. [17]J. Robert Vannoy, notes on 2 Kings, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 532. [18]ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವಾಗ ಸೇವಕನ ಮೇಲೆ ಕೈಯನ್ನಿಡುವದು ಇದೊಂದು ಪೌರ್ವಾತ್ಯ ದೇಶದ ಅರಸರ ಪದ್ಧತಿಯಾಗಿತ್ತು. “ಕೈಯನ್ನು ಹಿಡಿದು” ಎಂಬುದು “ಅವಲಂಭಿಸಿರುವದು”

ಎಂಬುದನ್ನು ಸೂಚಿಸುವುದಾಗಿದೆ. ಅರಸನು "ಆತುಕೊಳ್ಳುವ" ಮನುಷ್ಯನು ಸಾಮಾನ್ಯವಾಗಿ ಆತನ ವಿಶ್ವಾಸಕ್ಕೆ ಯೋಗ್ಯವಾದ ಮತ್ತು ಆತನು ನಂಬತಕ್ಕ ಸಲಹೆಗಾರನಾಗಿರುತ್ತಿದ್ದನು (2 ಅರಸು 7:2ರ ಜೊತೆ ಹೋಲಿಸಿರಿ). [19]Keil and Delitzsch, 321. [20]Miller, 336.

[21]ಈ ಸನ್ನಿವೇಶವು Elaine J. Fletcher, *Elisha, the Miracle Prophet* (Washington, DC: Review and Herald Publishing Association, 1960), 48; and Theodora Wilson, *Virtue's Bible Stories* (London: Virtue & Co., n.d.), 300 ದಿಂದ ಸೂಚಿಸಲ್ಪಟ್ಟಿದೆ.